ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಮಂತ್ರಿಗಳು) (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ "2004ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು: ಪ್ರಸ್ತಾಪ ಏನೆಂದರೆ,

ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ "2004ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು, ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

(iii) ಕರ್ನಾಟಕ ಭೂ ಸುಧಾರಣೆಗೆ (ತಿದ್ದುಪಡಿ) ವಿಧೇಯಕ, 2004

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಮಂತ್ರಿಗಳು) (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ "2004ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ಕೆಲವು ನಿರ್ದಿಷ್ಟ ವಿಸ್ತೀರ್ಣದ ಭೂಮಿಯನ್ನು ನಾವು ಕನ್‌ವರ್ಷನ್ ಮಾಡಿಕೊಳ್ಳುವುದಕ್ಕೆ ಸರ್ಕಾರದವರೆಗೂ ಬರಬೇಕಾಗಿತ್ತು, ಡೆಪ್ಯೂಟಿ ಕಮೀಷನರ್, ಡಿವಿಜಿನಲ್ ಕಮಿಶನರ್‌ಗಳು ಈಗ ಇಲ್ಲ, ರೆವಿನ್ಯೂ ಕಮೀಶನರ್, ಚೀಫ್ ಸೆಕ್ರೆಟರಿ, ಹೈ ಪವರ್ ಕಮಿಟಿ, ಎಂದು ಇದ್ದು ಸಣ್ಣ ಸಣ್ಣ ವಿಚಾರಗಳಿಗೂ ಸಮಯವನ್ನು ತೆಗೆದುಕೊಂಡು, ನಮಗೆ ತೊಂದರೆಯಾಗುತ್ತಿತ್ತು, ಈ ತೊಂದರೆಯನ್ನು ತಪ್ಪಿಸುವ ಸಲುವಾಗಿ, ನಾವು ತಿದ್ದುಪಡಿಯ ಮೂಲಕ ಈ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡುವಂತಹದ್ದು, ಸುಮಾರು ಒಂದೂವರೆ ಎಕರೆ ಭೂಮಿಯನ್ನು ಕನ್‌ವರ್ಷನ್ ಮಾಡಿಕೊಳ್ಳುವಂತಹ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡುವಂತಹ ಈ ತಿದ್ದುಪಡಿ ಪ್ರಸ್ತಾವನೆಯನ್ನು, ಸದನದ ಮುಂದೆ ತಂದಿದ್ದೇನೆ, ಇದನ್ನು ಪಾಸ್ ಮಾಡಿಕೊಡಬೇಕೆಂದು, ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಇದರ ನಿಬಂಧನೆಗಳು ಏನು ಇವೆ? ಇದು ಎನಾದರೂ ಇರಬೇಕಲ್ಲಾ? ಇದನ್ನು ಹೇಳಬೇಕಲ್ಲಾ?

ಶ್ರೀ ಹೆಚ್. ವಿಶ್ವನಾಥ್: ಮಾನ್ಯ ಪಾಟೀಲ್‌ರವರೆ, ಇದರಲ್ಲಿ ಡಿಟ್ಯೆಲ್ ಆಗಿ ಬರುತ್ತದೆ: ಒಂದು ದೇವಸ್ಥಾನಕ್ಕೆ, ಮಸೀದಿಗೆ, ಚರ್ಚ್‌ಗೆ, ಜಾಗಬೇಕೆಂದರೆ, ಒಂದು ಪ್ರಾರ್ಥನಾ ಮಂದಿರಕ್ಕೆ, ಕೈ ತೋಟಕ್ಕೆ ಜಾಗ ಬೇಕು.

ಶ್ರೀ ಎಸ್.ಎಸ್. ಪಾಟೀಲ್: ನೀವು ಅವರಿಗೆ ಕೊಡುವ ಹಾಗೆ ಮಾಡಿ, ಹಿಂದಕ್ಕೆ ಹಾಕಿ ಬಿಡುತ್ತೀರಿ, ಇಲ್ಲಿ ಪ್ರಶ್ನೆ ಅಹ ಬರುವುದಿಲ್ಲ, ಇಲ್ಲಿ ಉಳಿದದ್ದು ಕೊಡುತ್ತೀರಿ, ನೀವು ಉತ್ತರ ಹೇಳಿದರೆ ಸರಿಯಾಗುವುದಿಲ್ಲ, ನೀವು ಕೊಡುವ ಮುನ್ನ ನಿರ್ಬಂಧಗಳು ಏನೆಂಬುದನ್ನು ಹೇಳಿ, ನೀವು ಯಾವ ಜನರಿಗೆ ಕೊಡಬೇಕೆಂದು ಹೇಳಿ ಅದನ್ನು ಹಂಚುವುದಕ್ಕೆ ಎಂದು ಇರುತ್ತಾರೆ, ಆ ಜಮೀನುಗಳನ್ನು ಯಾವ ನಿಬಂಧನೆಗಳಿಗೆ ಒಳಪಡಿಸಿ ಕೊಡುತ್ತೀರಾ?

ಈ ಬಿಲ್‌ನಲ್ಲಿರುವ ನಿಬಂಧನೆಗಳೇನು ಎನ್ನುವ ಬಗ್ಗೆ ಏನಾದರೂ ಹೇಳಬೇಕಲ್ಲಾ, ಏನಾದರೂ ಇಲ್ಲಬೇಕಲ್ಲಾ.

ಶ್ರೀ ಹೆಚ್.ವಿಶ್ವನಾಥ್: ಪಾಟೀಲರೇ, ಅದರ ವಿವರ ಬರುತ್ತದೆ, ಒಂದು ಯಾವುದೋ ದೇವಸ್ಥಾನಕ್ಕೆ ಬೇಕಾಯಿತು, ಮಂದಿರಕ್ಕೆ ಬೇಕಾಯಿತು, ಒಂದು ಮಸೀದಿಗೆ, ಚರ್ಚ್‌ಗೆ ಬೇಕೆಂದಾಗ, ಪ್ರಾರ್ಥನೆ ಮಂದಿರಕ್ಕೆ ಇನ್ನೊಂದು ಕೈತೋಟಕ್ಕೆ ಬೇಕೆಂದಾಗ.....

ಶ್ರೀ ಎಸ್.ಎಸ್. ಪಾಟೀಲ್: ನೀವು ಹೇಳುವುದು ಸಮಂಜಸ ಉತ್ತರವಾಗುವುದಿಲ್ಲ, ಅವರಿಗೆ ಕೊಡುವ ಮುನ್ನ ನಿಬಂಧನೆ ಏನು ಹೇಳುತ್ತೀರಿ ಅದನ್ನು ಹೇಳಿ, ಯಾರಿಗೆ ಜಮೀನುಗಳನ್ನು ಕೊಡಬೇಕೆಂದು ಇಟ್ಟುಕೊಂಡಿರುತ್ತಾರೋ ಅದನ್ನು ತೆಗೆದು ಇಡುತ್ತಾರೆ ಅಧ್ಯಕ್ಷರೇ, ಆ ಜಮೀನನ್ನು ಅವರಿಗೆ ಯಾವ ನಿಬಂಧನೆಗಳಿಗೆ ಒಳಪಟ್ಟು ಕೊಡುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್: ಅದೆಲ್ಲಾ ರೂಲ್ಸ್‌ನಲ್ಲಿ ಬರುತ್ತದೆ.

ಶ್ರೀ ಹೆಚ್.ವಿಶ್ವನಾಥ್: ಅಧ್ಯಕ್ಷರೆ, ಇಲ್ಲಿ ಏನೋ ಒಂದು ಉತ್ತರವನ್ನು ಕೊಡುವುದು, ಅವರಿಗೆ ಕೆಲವೊಂದು ನಿಬಂಧನೆಗಳನ್ನು ಹಾಕುತ್ತೀರಿ, ಅವು ಯಾವುವು?

ಶ್ರೀ ಹೆಚ್.ರಂಗನಾಥ್ (ಅರಣ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಪಾಟೀಲರ ಅಪ್ರಹೆಷನ್ ಸರಿಯಾಗಿದೆ, ಕಾಲ ನಿಗದಿಯಾಗದೆ ಹೋದರೆ ಹೇಗೆಂದು, ನಿಬಂಧನೆಗಳೇನು ಎಂಬುದು ರೂಲ್ಸ್‌ನಲ್ಲಿ ಹೇಳಲಾಗುತ್ತದೆ. ಅದಕ್ಕೆ ನಮ್ಮ ಸಚಿವಸಂಪುಟ ಕೂಡ ಬಹಳಷ್ಟುವಾಗ, ಈ ಒಂದು ಅಭಿಪ್ರಾಯಕ್ಕೆ ಬಂದ ನಂತರವೇ ಅದನ್ನು ಒಪ್ಪಿರುವುದು.

ಶ್ರೀ ಎಸ್.ಎಸ್. ಪಾಟೀಲ್: ನಿಬಂಧನಗಳೇನೆಂಬುದು ನಿಮ್ಮಬ್ಬರಿಗೂ ಗೊತ್ತಿಲ್ಲ, ಸಂಬಂಧಪಟ್ಟ ಸಚಿವರು ಸದನದಲ್ಲಿದ್ದ ವಿವರಣೆಯನ್ನು ನಮಗೆ ಕೊಡಬೇಕಾಗುತ್ತದೆ, ಇದನ್ನು ಪಾಸ್ ಮಾಡುವ ಮುನ್ನ ವಿವರಣೆ ಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್: ನಾನು ಸ್ಪಷ್ಟಪಡಿಸುವುದಾದರೆ ಒಂದು ತಿಂಗಳೂಳಗೆ ಆಗುತ್ತದೆನ್ನುವ ಅಭಿಪ್ರಾಯವಿದೆ, ಅಷ್ಟು ನಿರ್ಬಂಧವನ್ನು ಹಾಕೇ ಹಾಕುತ್ತೇವೆ, ಅವರಿಗೆ ಕೊಡುತ್ತೇವೆಂದು ವರ್ಷಗಟ್ಟಲೆ ಇಡುವಂತಹದ್ದಲ್ಲ.

ಶ್ರೀ ಎಸ್.ಎಸ್. ಪಾಟೀಲ್: ತಾವು ಹಿರಿಯ ಸಚಿವರು, ಏನಾದರೂ ಒಂದು ಉತ್ತರ ಹೇಳಿದರೆ ಹೇಗೆ? ಅದಕ್ಕೆ ಸಂಬಂಧಪಟ್ಟ ಸಚಿವರು ಇದ್ದು ಇದಕ್ಕೆ ಉತ್ತರ ಕೊಟ್ಟರೆ ಒಳ್ಳೆಯದು, ಆ ಇಲಾಖೆಯ ಅಧಿಕಾರಿಗಳು ಇರುತ್ತಾರೆ ಅವರಿಂದ ಚೀಟಿಯ ಮೂಲಕ ಮಾಹಿತಿಯನ್ನು ಪಡೆದುಕೊಂಡು ಆ ನಿಬಂಧನಗಳೇನು ಎನ್ನುವುದಾದರೂ ಕೊನೆಯ ಪಕ್ಷ ಹೇಳಿ, ನಿಬಂಧನೆಗಳನ್ನು ಏನು ಹಾಕುತ್ತೀರೆಂಬುದು ಪ್ರಶ್ನೆ ಇರುವುದು, ಒಬ್ಬನಿಗೆ ಜಮೀನು ಕೊಡುತ್ತೇವೆಂದರೆ ಯಾವ ನಿಬಂಧನೆಗಳಿಗೆ ಒಳಪಟ್ಟು ಹಂಚುತ್ತೀರಿ, ಅವ್ಯಾವುವು ಎನ್ನುವುದನ್ನು ಇಲ್ಲಿ ಹೇಳಬೇಕಲ್ಲಾ; ಸದನಕ್ಕೆ ಈ ಬಗ್ಗೆ ಮಾಹಿತಿ ಬೇಕಲ್ಲವೆ?

ಶ್ರೀ ಕೆ.ಹೆಚ್. ರಂಗನಾಥ್: ತಮಗೆ ಈ ಬಗ್ಗೆ ಇರುವ ಭಯವನ್ನು ಸ್ವಚ್ಛಪಡಿಸುವ ಸಲುವಾಗಿ ಸಾರ್ವಜನಿಕ ದೃಷ್ಟಿಯಿಂದ ಪ್ರಸ್ತಾಪ ಮಾಡಿದೆ. ಅವರೂ ಕೂಡ ಕ್ಯಾಬಿನೆಟ್‌ನಲ್ಲಿ 5 ವರ್ಷ ಫುಲ್ ಟರ್ಮ್ ಇದ್ದರು ಎಲ್ಲವನ್ನೂ ಇಲ್ಲಿ ಹೇಳುತ್ತಿದ್ದರಾ, ಹೇಳಿ ಸ್ವಾಮಿ?

ಶ್ರೀ ಎಸ್.ಎಸ್. ಪಾಟೀಲರು: ಹಿರಿಯ ಸಚಿವರು ಎಂದರೆ, ಅನುಭವಿತರು ಎಂದರ್ಥ, ಕ್ಯಾಬಿನೆಟ್‌ನಲ್ಲಿ ಆಗಿದ್ದು ಅಲ್ಲಿ ಮುಚ್ಚಿಡುತ್ತಾರೆ, ಅದೆಲ್ಲಾ ಇಲ್ಲಿ ಬರಬೇಕಾಗುತ್ತದೆ; ಸದನದಲ್ಲಿ ತಾವೇನಾದರೂ ತರಬೇಕಾದರೆ ವಿವರವನ್ನು ಇಲ್ಲಿ ಹೇಳಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್: ಮಾನ್ಯ ಸದಸ್ಯರು, ಲ್ಯಾಡ್ ರಿಫೋರ್ಮ್ಸ್ ಬಂದ ಕಾಲದಲ್ಲಿ ಈ ಸಭೆಯಲ್ಲಿ ಇರಲಿಲ್ಲ, ಆ ಕಾಲದಲ್ಲಿ ನಾನು ಇದ್ದೇನೆ, ಬಹಳ ಕಟ್ಟುನಿಟ್ಟಾಗಿ ಮಾಡಿದ್ದೇವೆ, ಕಾರಣಾಂತರದಿಂದ ಕಾಲಗತಿಸಿದಂತೆ ಕೆಲವು ಮಿತಿಗಳನ್ನು ಸಡಿಲಗೊಳಿಸುವ ಪರಿಸ್ಥಿತಿ ಬಂದಿದೆ. ಸಚಿವಾಲಯಕ್ಕೆ ಬಂದು ವರ್ಷಗಟ್ಟಲೆ ಕುಳಿತುಬಿಡುತ್ತದೆ, ಆದಾಗಬಾರದೆಂದು, ಡಿ.ಸಿಗೂ ಕೂಡ ಅರ್ಧ ಹೆಕ್ಟೇರ್ ಕೊಡಬಹುದು ಅದಕ್ಕಿಂತ ಜಾಸ್ತಿ ಇಲ್ಲ, ಒಂದೂವರೆ ಎಕರೆ ಎಂದು ಹೇಳಿದರು.

ಶ್ರೀ ಎಸ್.ಎಸ್. ಪಾಟೀಲ್: ತಾವು ಎಷ್ಟು ಕೊಡಬೇಕೆಂದಿದ್ದಿರೋ ಆ ಬಗ್ಗೆ ನಮಗೆ ಸಂತೋಷ ಆದರೆ ಆ ನಿಬಂಧನೆಗಳೇನೆಂಬುದನ್ನು ತಿಳಿಸಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್: ಮೆಚ್ಚಿಕೊಳ್ಳುವ ಪ್ರಶ್ನೆಗೆ ನಾವೂ ಒಪ್ಪಿಕೊಳ್ಳುವುದಿಲ್ಲ, It can't be liberalized like that. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನ ಮೂಲ ಉದ್ದೇಶ ರೈತ ಇಂತಹ ಮೋಸಕ್ಕೆ ಒಳಗಾಗಿ ಎಲ್ಲಾ ಭೂಮಿಯನ್ನು ಕಳೆದುಕೊಳ್ಳಬಾರದು, ವ್ಯವಸಾಯ ಮಾಡುವವನಿಗೆ ಸ್ವಲ್ಪ ಭೂಮಿ ಇರಬೇಕು ಎನ್ನುವುದೇ ನಮ್ಮ ಮೂಲ ಉದ್ದೇಶ. ಅದಕ್ಕಾಗಿಯೇ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಬಂದದ್ದು, ಇನ್ಯಾವುದಕ್ಕೆ ಬಂತು? ಹನ್ನೆರಡು ಸಾವಿರಕ್ಕಿಂತ ಕಡಿಮೆ ವಾರ್ಷಿಕ ವರಮಾನ ಇರುವವನು, ಇಷ್ಟು ಭೂಮಿ ಇರುವವನು ಮಾರಾಟ ಮಾಡಲೇಬಾರದು ಎನ್ನುವ ಮಿತಿಯನ್ನು ನಾವು ಹಾಕಿದ್ದೆವು. ನಾನೂ ಕೂಡ ಬಹಳ ಸ್ಟಿಕ್ಟ್ ಆಗಿ ಇದ್ದೇನೆ, 5 ಜನಕ್ಕೆ 50 ಎಕರೆ ಕುಸ್ಕಿ ಭೂಮಿ ಇರಬೇಕು ಎನ್ನುವವನು ನಾನು, ಆದರೆ ಬರೀ ವ್ಯವಸಾಯವನ್ನೇ ಅವಲಂಬಿಸಿರುವ ಕುಸ್ಕಿ ಪ್ರದೇಶದಲ್ಲಿ ಒಂದು ಎಕರೆಗೆ ಮೂರ್ನಾಲ್ಕು ಚೀಲ ಜೋಳ ಬೆಳೆದರೂ ಕೂಡ ಪಾಟೀಲರಿಗೆ ಗೊತ್ತಿರುವಂತೆ ಐವತ್ತು ಎಕರೆ ಭೂಮಿಯೂ ಸಾಕಾಗುವುದಿಲ್ಲ. ಮೊದಲು ಖರ್ಚು ಇರುತ್ತಿರಲಿಲ್ಲ, ಮಕ್ಕಳು ಶಾಲೆಗೆ ಹೋಗುತ್ತಿರಲಿಲ್ಲ ಮತ್ತೊಂದು ಇರುತ್ತಿತ್ತು ಆ ಹಿನ್ನೆಲೆಯಲ್ಲೇ ಮಾಡಿದರು. ಇವತ್ತೂ ಕೂಡ ಜಪಾನ್‌ನಲ್ಲಿ ಲ್ಯಾಂಡ್ ರಿಫಾರ್ಮ್ಸ್‌ಗೆ ಸಂಬಂಧಿಸಿದಂತೆ ಕೆಲವು ಮಿತಿಗಳನ್ನು ಇಟ್ಟುಕೊಂಡಿದ್ದಾರೆ; ಎಲ್ಲವನ್ನೂ ತೆಗೆದು ಕೊಟ್ಟಿಲ್ಲ. ಆದರೆ ಇಲ್ಲಿ ಬರುತ್ತಾ ಬರುತ್ತಾ ಹಣಕಾಸಿನವರಿಗೆ ಅನುಕೂಲವಾಗುವ ರೀತಿಯಲ್ಲಿ ಲ್ಯಾಂಡ್ ರಿಫಾರ್ಮ್ಸ್ ತೀರ ಸಡಿಲವಾಗುವುದನ್ನು ನಾವು ನೋಡಿದ್ದೇವೆ. ಆದರೆ ಇಲ್ಲೂ ಕೂಡ ನಮಗೆ ಇಷ್ಟವಿಲ್ಲ, ಆದರೆ ಅನಿವಾರ್ಯ ಪರಿಸ್ಥಿತಿಯಿಂದ ಸರ್ಕಾರದಲ್ಲಿರುವುದನ್ನು ಸ್ವಲ್ಪ ಸಡಿಲಮಾಡಬೇಕೆಂದು ಮಾಡಿರುವುದು; ಇದಕ್ಕಿಂತ ಸ್ಪಷ್ಟಪಡಿಸಲು ಸಾಧ್ಯವಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಸಚಿವರೇನು ದೇವರಾಜ ಅರಸುರವರ ಕಾಲಕ್ಕೆ ನಾವು ಈ ಮಿತಿ 50 ಎಕರೆ ಮಾಡಿದ್ದು ತಪ್ಪು ಎನ್ನುವ ಅರ್ಥದಲ್ಲಿ ಹೇಳಿದರು. ಇದು ಜಾಸ್ತಿ ಇರಬೇಕಾಗಿತ್ತು ಎಂದು ಹೇಳಿದರೆ ಇದು ತಪ್ಪೆಂದೇ ಅರ್ಥ. ನಾನು ಹೇಳುತ್ತೇನೆ, ಆಗ ಯಾರ್ಯಾರು ಬಲಾಢ್ಯರಿದ್ದರೋ ಅವರು ಉಳಿಸಿಕೊಂಡಿದ್ದಾರೆ, ಕಾಫಿಪ್ಲಾಂಟರ್ಸ್‌ಗೆ ಮಿತಿ ಸಾವಿರಾರು ಎಕರೆ ಇಟ್ಟರು. ಬಯಲು ಸೀಮೆಯವರಿಗೆ 50 ಎಕರೆ ಮಿತಿ ಇಬ್ಬರು, ಅವರಿಗೆ ತಿನ್ನಲು ಕೂಳಿಲ್ಲ, ನಿಮ್ಮ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವತ್ತು ನೀವ್ಯಾರೂ ಧೈರ್ಯ ಮಾಡಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ಎರಡು ಬೆಳೆಗೆ ನೀರಿನ ಅನುಕೂಲವಿರುವ 10 ಎಕರೆಗೆ ಮಿತಿ ಎಂಬುದು ತಮಗೆ ಗೊತ್ತಿದೆ, ಕುಷ್ಕಿ ಪ್ರದೇಶದಲ್ಲಿ 50 ಎಕರೆ ಎನ್ನುವುದಿದೆ, ನಾನು ಕಾಂಗ್ರೆಸ್ ಪಕ್ಷದ

ಅಧ್ಯಕ್ಷನಾಗಿದ್ದಾಗಲೂ ಕೂಡ ಆವತ್ತು ನಾನು ಅದಕ್ಕೆ ಹೌದು ಎಂದಾಗಲೂ ಕೂಡ ಇವತ್ತು ವಸ್ತುಸ್ಥಿತಿಯನ್ನು ಪರಿಶೀಲನೆ ಮಾಡಿದಾಗ ನನಗನ್ನಿಸಿತು ಅದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ವೈಯಕ್ತಿಕವಾಗಿ ಇವತ್ತು ಅನ್ನಿಸುತ್ತದೆ. 50 ಎಕರೆ ಕುಷ್ಕಿ ಜಮೀನು ಇಟ್ಟುಕೊಂಡು ಬರೀ ವ್ಯವಸಾಯದಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ, ಅದರಲ್ಲೂ ಕಪ್ಪು ಭೂಮಿಯಲ್ಲಿ ಜೋಳವನ್ನೇ ಬೆಳೆಯುವವರಿಗೆ ಆಗುವುದಿಲ್ಲ. ಇವತ್ತು ಬೋರ್‌ವೆಲ್‌ಗಳನ್ನು ಹಾಕಿ ವ್ಯವಸ್ಥೆ ಮಾಡುವುದು ಬಂದ ಮೇಲೆ ಆ ಹಿನ್ನೆಲೆಯಲ್ಲಿ ಬೇರೆಯಾಗುತ್ತಿದೆ. ತೀರ ಕಳೆದುಕೊಂಡು ಗರೀಬರಾಗುತ್ತಾರೆಂದು ಆ ಒಂದು ಮಿತಿಯನ್ನು ಇಟ್ಟಿದ್ದೇವು. ಇವತ್ತು ಆ ದೃಷ್ಟಿಯಿಂದ ವಿಚಾರ ಮಾಡುವಾಗ ತಾವು ಅರ್ಧ ಎಕರೆಗೆ ಈ ಒಂದು ಅನುಕೂಲವನ್ನು, ಈಗ ನನ್ನದು ಸ್ವಾಮಿ, ಒಂದು ಗುಂಟೆ ಸ್ಮಶಾನಕ್ಕೆ ಕನ್ಸರ್ವೇಷನ್ ಆಕ್ಟ್ ಪ್ರಕಾರ ಕೇಂದ್ರ ಸರ್ಕಾರಕ್ಕೆ ಹೋಗಬೇಕು, ನನಗೆ ಕಳುಹಿಸಿ ಕಳುಹಿಸಿ ಸಾಕಾಗುತ್ತದೆ. ಇವತ್ತೂ ಕೂಡ ಸಂವಿಧಾನದಲ್ಲಿ ಫಾರೆಸ್ಟ್ ಆಕ್ಟ್ ನಮ್ಮ ಅಧಿಕಾರವ್ಯಾಪ್ತಿಯಲ್ಲಿರುವಂತಹದ್ದು, ಆದರೂ ರಕ್ಷಣೆಯ ದೃಷ್ಟಿಯಿಂದ ನಾವು ಅದನ್ನು ಒಪ್ಪಿಕೊಂಡಿದ್ದೇವೆ; ಈ ಸದನ ಒಪ್ಪಿಕೊಂಡಿದೆ. ಹೀಗೆ ಕೆಲವೊಂದು ಬದಲಾವಣೆ ಮಾಡುವ ಪರಿಸ್ಥಿತಿ ಬರುವಾಗೆ ಮಾಡಿ ಆಗದೆ, ಆದರೆ ತೀರಾನಿರ್ಗತಿಕರವನ್ನಾಗಿ ಮಾಡಿದರೆ ಅಲ್ಲೇನು ಉಳಿಯುತ್ತದೆ? ನಿಮ್ಮಲ್ಲಿ ಏಕೆ ಗೂಳೆಬಿಟ್ಟುಕೊಂಡ ಗೋವಾ ಮತ್ತಿತರ ಕಡೆ ಹೋಗುತ್ತಾರೆಂದರೆ ಎಲ್ಲಾ ಪಟೇಲ್ ಎಂದು 300–400 ಎಕರೆ ಇಟ್ಟುಕೊಂಡಿದ್ದೀರಿ ಅವರಿಗೆ ಅಲ್ಲಿ ಏನೂ ಇಲ್ಲ. ನಮ್ಮಲ್ಲಿ ಹಾಗಲ್ಲ ಹಳೇ ಮೈಸೂರಿನಲ್ಲಿ ಅಥವಾ ಮದ್ರಾಸ್‌ನ ಕೆಲವು ಭಾಗಗಳಲ್ಲಿ ರೈತ್ವಾರಿ ಸಿಸ್ಟಂ ಆಫ್ ಲ್ಯಾಂಡ್ ಟೆನ್ಯೂರ್‌ನಲ್ಲಿ, ಈ ಶ್ರೀನಿವಾಸಗೌಡರನ್ನು ಕೇಳಿ, ನಮ್ಮಲ್ಲಿ ನೂರು ಎಕರೆ ಜಮೀನಿದ್ದರೆ ಭಾರಿ ಶ್ರೀಮಂತ ಮಾನ್ಯ ಶ್ರೀನಿವಾಸಗೌಡರ ಜಿಲ್ಲೆ ಕೋಲಾರ ವ್ಯವಸಾಯದಲ್ಲಿ ಅತಿ ಉತ್ತಮವಾದ ಬೆಳೆಯನ್ನು ತೆಗೆಯುತ್ತಾರೆ, ಒಂದು ಎಕರೆಯಲ್ಲಿ ಕನಿಷ್ಟ 20–25 ಸಾವಿರ ರೂಪಾಯಿಗಳ ಬೆಳೆಯನ್ನು ತೆಗೆಯದಿದ್ದರೆ ಆತನ ಮನೆಗೆ ಯಾರೂ ಹೆಣ್ಣನ್ನೇ ಕೊಡುವುದಿಲ್ಲ. ನೀವು ನೂರು ಎಕರೆಯಲ್ಲಿ ಹತ್ತಿ ಬೆಳೆಯುತ್ತೀರಿ, ಭಾರಿ ದೊಡ್ಡ ಸಾಹುಕಾರ ಪಾಟೀಲರ ಮನೆಗೆ ಹೆಣ್ಣು ಕೊಡು ಎನ್ನುತ್ತಾರೆ; ಇಲ್ಲಿ ಯಾರ ಮನೆಗೆ ಕೊಡುತ್ತಾರೆ, ಯಾವ ಪಾಟೀಲನ ಮನೆಗೂ ಕೊಡುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ರಂಗನಾಥ್ ಸಾಹೇಬರು ಬಹಳ ಚೆನ್ನಾಗಿ ಹೇಳಿದ್ದಾರೆ, ನಿಜವಾಗಿಯೂ ನಿಮ್ಮನ್ನು ಬೆಂಬಲಿಸುತ್ತೇನೆ, ನಿಮ್ಮ ವಿಚಾರವನ್ನು ಬೆಂಬಲಿಸುತ್ತೇನೆ, ಬಹಳ ಒಳ್ಳೆಯದಿದೆ. ಈಗ ತಾವು ಹೇಳಿದಂತೆ ಆ ಪಾಟೀಲರನ್ನೆಲ್ಲಾ ತಿದ್ದೊಂಡು ತಿನ್ನುವುದಕ್ಕೆ ಹಚ್ಚುವುದಕ್ಕೇ ಇದನ್ನೆಲ್ಲಾ ಮಾಡಿದ್ದು; ಇದರಲ್ಲಿ ಏನೂ ಸಂಶಯವಿಲ್ಲ. ಜಮೀನ್ದಾರನಿಗೆ ತಿನ್ನುವುದಕ್ಕೆ ಕೂಳಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್: ಕುಡಿಯುವುದು, ಇಸ್ಪೀಟ್ ಆಡುವುದನ್ನು ಕಲಿತುಕೊಂಡು ಹೋಗಿರಬಹುದು.

ಶ್ರೀ ಎಸ್.ಎಸ್. ಪಾಟೀಲ್: ಅದಕ್ಕೆ ನಾನು ಹೇಳುವುದು, ಅದನ್ನು ಹೆಚ್ಚು ಮಾಡಲು ಸಾಧ್ಯವಿದ್ದರೆ ಮಾಡಬೇಕಾಗಿತ್ತು; ನಾನು ಅದಕ್ಕೆ ಬೆಂಬಲಿಸುತ್ತೇನೆ, ನಾನು ಇಲ್ಲವೆನ್ನುವುದಿಲ್ಲ. ಅಧ್ಯಕ್ಷರೇ, ತಾವೂ ಇದ್ದೀರಿ, ಇವತ್ತು 50 ಎಕರೆ ಜಮೀನಿದ್ದು ತಿನ್ನುವುದಕ್ಕೆ ಕೂಳಿಲ್ಲ, ಯಾರು ಭಾರಿ ಜಮೀನ್ದಾರೆಂದು ತಿಳಿದುಕೊಂಡು ಮಾತನಾಡುತ್ತಿದ್ದರು, ಅಂತಹವರಿಗೆ ತಿನ್ನುವುದಕ್ಕೆ ಕೂಳಿಲ್ಲ, ಸಾಹೇಬರು ಮಾತನಾಡುವುದಕ್ಕೆ ಹೇಳುತ್ತಿದ್ದೇನೆ, ಸಾಹೇಬರು ತಂದಿದ್ದು ಜಮೀನ್ದಾರನ್ನೆಲ್ಲಾ ಹಾಳು

ಮಾಡಿ ತಿರ್ಕೊಂಡು ತಿನ್ನುವುದಕ್ಕೆ ಹಚ್ಚಿದರು, ಇದೆಲ್ಲಾ ಇತಿಹಾಸ ಗೊತ್ತಿದೆ, ನಿಮಗೆಲ್ಲಾ ಮನಸ್ಸಿದ್ದರೂ ಕೂಡ ಅವತ್ತು ಅನಿವಾರ್ಯ ಪರಿಸ್ಥಿತಿ ಇತ್ತೆಂದು ಸುಮ್ಮನಾದಿರಿ, ಅವತ್ತು ವಿರೋಧಿಸಿದವರು ಯಾರಾದರು ಇದ್ದಾರೆಂದರೆ ಶ್ರೀಮತಿ ಬಸವರಾಜೇಶ್ವರಿಯವರು ಈ ಸದನದಲ್ಲಿ ವಿರೋಧಿಸಿದ್ದಾರೆ, 50–25 ಎಕರೆಗೆ ಇಳಿಸುವುದಕ್ಕೆ ಅದನ್ನು ಮತ್ತೆ ತಂದಿದ್ದರು, ತರುವಂತಹ ವಿಚಾರ ಮಾಡಿದರು, ಶ್ರೀಮತಿ ಬಸವರಾಜೇಶ್ವರಿ ಒಬ್ಬರೇ ವಿರೋಧ ಮಾಡಿ ಏನು ಹೇಳಿದರೆಂದರೆ, ಬೇಡ ನಮ್ಮೆಲ್ಲಾ ಜಮೀನನ್ನು ಕೂಡುತ್ತೇವೆ ನಮಗೆ ದುಡಿಯುತ್ತೇವೆ, ಎರಡು ಹೊತ್ತು ಊಟ ಕೊಡಿ ಎಂದು ಕೇಳಿದ್ದಾರೆ, ನಡೆದಂಥ ವ್ಯವಹಾರ ಇದು.

ಶ್ರೀ ಕೆ.ಜೆಚ್. ರಂಗನಾಥ್: ಹಳೆಯ ಮೈಸೂರಿನಲ್ಲಿ ಅಂದೂ ಕೂಡ ಲ್ಯಾಂಡ್ ರಿಫಾರ್ಮ್ಸ್ ಅನ್ನು ವಿರೋಧ ಮಾಡಿದಂಥ ಜನರಿದ್ದರು, ಅದಕ್ಕೆ ದಿವಂಗತ ಕಡಿದಾಳ್ ಮಂಜಪ್ಪನವರು ಹೊಸ ಒಂದು ವಿಚಾರವನ್ನು ಕಾರಣಾಂತರದಿಂದ ತಂದಿಟ್ಟರು. ಮತ್ತೆ ದೇವರಾಜ ಅರಸ್ ಕಾಲದಲ್ಲಿ ಮತ್ತೆ ಲಿಬರಲೈಸ್ ಮಾಡಿದರು. ಯಾವತ್ತೂ ಬೇಕಾದರೂ owner, he could have taken back. ಈವತ್ತು ಆ ಅಧಿಕಾರ ಇಲ್ಲದ ಹಾಗೆ ಮಾಡಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ನಾನು ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಇವತ್ತು ಕಾಫಿ ಪ್ಲಾಂಟರುಗಳಿಗೆ ಒಂದು ಸಾವಿರ ಎಕರೆ ಇದ್ದರೂ ನಡೆಯುತ್ತದೆ ಆದರೆ ಬಯಲುಸೀಮೆಯವರಿಗೆ 50 ಎಕರೆ ಎಂದು ಮಾಡಿದಿರಿ. ಹೀಗಾಗಿ, ಆ ಜಮೀನುದಾರರನ್ನು ನಿರ್ಗತಿಕರನ್ನಾಗಿ ಮಾಡುವ ವ್ಯವಸ್ಥಿತ ಪಿತೂರಿ ನಡೆಯುತ್ತಿದೆ. ಪರಿಸ್ಥಿತಿ ಏನಿದೆ ಎಂದು ಯಾರೂ ವಿಚಾರ ಮಾಡಲಿಲ್ಲ. ಎಲ್ಲರೂ ಬಾಯಿ ಮುಚ್ಚಿಕೊಂಡು ಕುಳಿತಿದ್ದಿರಿ. ಇದು ಅವತ್ತು ಆದಂಥ ವ್ಯವಸ್ಥೆ.

ಶ್ರೀ ಕೆ.ಜೆಚ್. ರಂಗನಾಥ್: ಪಾಟೀಲರೇ, ದಯಮಾಡಿ ಕೇಳಿ. ನಮಗೂ ಚರಿತ್ರೆ ಗೊತ್ತಿದೆ. 1–11–1956 ರವರೆಗೆ ಟೆನೆನ್ಸಿ ಆಕ್ಟೇ ಇರಲಿಲ್ಲ. ಮೊರಾರ್ಜಿ ದೇಸಾಯಿಯವರು ತಂದಂಥ ಟೆನೆನ್ಸಿ ಆಕ್ಟ್ 1–11–1956ರಿಂದ ಬಾಂಬೆ ಕರ್ನಾಟಕದಲ್ಲಿ ಜಾರಿಗೆ ಬರುತ್ತಿತ್ತು. ಅಷ್ಟರಲ್ಲಿ, ಕಾರಣಾಂತರದಿಂದ ಕರ್ನಾಟಕ ಆಗಿದ್ದರಿಂದ ಇವರೆಲ್ಲಾ ಬದುಕಿಕೊಂಡರು. ಇವರ ಜಮೀನೆಲ್ಲಾ ಹೊರಟು ಹೋಗುತ್ತಿತ್ತು. Tenants would have been the owners of the land. ಆ ಸಮಯಕ್ಕೆ ಸರಿಯಾಗಿ ಜತ್ತಿಯವರ ಕಮಿಟಿ ಬಂತು. ಜತ್ತಿಯವರ ಕಮಿಟಿ ಮಾಡಿದ್ದರಿಂದ, ಅವರು ಪರಿಶೀಲನೆ ಮಾಡುತ್ತಾರೆ, ಆಗ ಮಾಡುತ್ತಾರೆ, ಈಗ ಮಾಡುತ್ತಾರೆ ಎಂದು ನಿಜಲಿಂಗಪ್ಪನವರು ತಲೆಯಾಡಿಸಿಕೊಂಡು ಮುಂದಕ್ಕೆ ಹಾಕಿಸಿಬಿಟ್ಟರು. ನಾನು ಎಲ್ಲವನ್ನೂ ಬಲ್ಲೆ, ಸುಮ್ಮನೆ ತಾವು ಏಕೆ ಮಾತನಾಡುತ್ತೀರಿ?

ಶ್ರೀ ಜೆಚ್. ವಿಶ್ವನಾಥ್: ಸಂಬಂಧ ಇಲ್ಲದೇ ಇರುವುದನ್ನು ಮಾತನಾಡುತ್ತಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್: ಅವರು ಯಾರ ಪರವಾಗಿ ಮಾತನಾಡಿದರು ಎಂದರೆ.....

ಅಧ್ಯಕ್ಷರು: ಪಾಟೀಲರೇ, ಈಗ ಕಾಂಟ್ರೊವರ್ಸಿ ಬೇಡ. ಇಲ್ಲಿ ಕೇಳಿ, ರಂಗನಾಥ್‌ರವರು ಹೇಳಿದ ಹಾಗೆ 1972ನೇ ಇಸವಿಯಲ್ಲಿ .....

ಶ್ರೀ ಎಸ್.ಎಸ್. ಪಾಟೀಲ್: ನನ್ನ ಪ್ರಶ್ನೆಗೆ ಯಾರೂ ಉತ್ತರ ಕೊಡಲಿಲ್ಲ. ಬೇರೆ ಚರ್ಚೆ ನಡೆಯುತ್ತಿದೆ. ಇದರಿಂದ ನನಗೇನು ಗೊತ್ತಾಗುತ್ತಿದೆ ಎಂದರೆ, ಯಾವುದೋ ಒಂದಷ್ಟು ಎಕರೆ ಜಮೀನು ಕೊಟ್ಟು, ಇಲ್ಲದ ಕಂಡೀಷನ್‌ಗಳನ್ನು ಹಾಕಿ. ಅದರಲ್ಲಿ ಅವನು ಹೋಗುವಂತೆ ಮತ್ತೆ ಬರುವಂತೆ ಮಾಡಿಬಿಟ್ಟರೆ ಹೇಗೆ; ಅದಕ್ಕಾಗಿ ಕಂಡೀಷನ್ಸ್ ಏನು ಎಂಬುದನ್ನು ಹೇಳಿ.

ಅಧ್ಯಕ್ಷರು: ಪಾಟೀಲರೇ, ಒಂದು ನಿಮಿಷ ತಡೆಯಿರಿ. 1972ರಲ್ಲಿ ಲ್ಯಾಂಡ್ ರಿಫಾರ್ಮ್ಸ್ ಕಮಿಟಿ ರಚನೆಯಾದಾಗ ಅದರಲ್ಲಿ ನಾನೂ ಸಹ ಕೌನ್ಸಿಲ್‌ನಿಂದ ಸದಸ್ಯನಾಗಿದ್ದೆ. ನಾನು, ಬಾಲಕೃಷ್ಣಶೆಟ್ಟರು ಎಲ್ಲರೂ ಇದ್ದೆವು. ದೇವರಾಜ ಅರಸುರವರ ಕಾಲದಲ್ಲಿ ಲ್ಯಾಂಡ್ ರಿಫಾರ್ಮ್ಸ್ ಆ್ಯಕ್ಟ್ ಬಂದಮೇಲೆ ಮೇಲ್ಮಟ್ಟದಲ್ಲಿ, ಇನ್ಯಾರ ಕಾಲದಲ್ಲೂ ಆಗಲಿಲ್ಲ. ಅಷ್ಟು ಮಾತ್ರ ನಾನು ಹೇಳಬಲ್ಲೆ.

ಶ್ರೀ ಎಸ್.ಎಸ್. ಪಾಟೀಲ್: ಆಗ ನಿಮಗೆ ಅನ್ಯಾಯವಾಗಲಿಲ್ಲವೇ? ನೀವೂ ಸಹ ಕಮಿಟಿಯಲ್ಲಿದ್ದಿರಿ ಎಂದು ಹೇಳುತ್ತಿದ್ದೀರಲ್ಲಾ. ಇವತ್ತು ನಿಮ್ಮ ಪರಿಸ್ಥಿತಿ ಏನಾಗಿದೆ? ಅವತ್ತು ಯಾರೂ ಧ್ವನಿ ಎತ್ತಲಿಲ್ಲ.

ಅಧ್ಯಕ್ಷರು: ಆಗ ಬಯಲುಸೀಮೆ ಪ್ರದೇಶಕ್ಕೆ 55 ಎಕರೆ ಎಂದು ಫಿಕ್ಸ್ ಮಾಡಿದ್ದರು.

ಶ್ರೀ ಎಸ್.ಎಸ್. ಪಾಟೀಲ್: ಇವತ್ತು ಅಷ್ಟು ಜಮೀನು ಇಟ್ಟುಕೊಂಡು ನೀವು ಬದುಕಲು ಆಗುತ್ತದೆಯೇ?

ಅಧ್ಯಕ್ಷರು: ಮಳೆ ಬರದಿದ್ದರೆ ಯಾರೂ ಬದುಕುವ ಹಾಗಿಲ್ಲ. 10 ಎಕರೆ ಇರುವವರೂ ಬದುಕುವ ಹಾಗಿಲ್ಲ, 55 ಎಕರೆಯವರೂ ಬದುಕುವ ಹಾಗಿಲ್ಲ.

ಶ್ರೀ ಹೆಚ್.ಎಂ. ದೇವಣ್ಣ: ಭೂ ಸುಧಾರಣಾ ಕಾಯ್ದೆ ಚೆನ್ನಾಗಿ ಅನುಷ್ಠಾನಕ್ಕೆ ಬಂದದ್ದು ಕರ್ನಾಟಕದಲ್ಲಿ, ನೀವು ಭೂ ಮಾಲೀಕರ ಪರ ಮಾತನಾಡುತ್ತಿದ್ದೀರಿ. ಭೂಮಿಯನ್ನು ಉಳುತ್ತಿದ್ದವರ ಪರ ಮಾತನಾಡಲು ನಿಮಗೆ ಧ್ವನಿಯಿಲ್ಲ, ಇದು ನಿಮ್ಮ ಅನಿಸಿಕೆಯಲ್ಲೇ ಗೊತ್ತಾಗುತ್ತಿದೆ. ಯಾರು ಉಳುಮೆ ಮಾಡುತ್ತಿದ್ದರೋ ಅವನಿಗೆ ಜಮೀನನ್ನು ಕೊಟ್ಟಿದೆ. ಅದರ ವಿರುದ್ಧವಾಗಿ ಮಾತನಾಡುವಿರಾ?

ಶ್ರೀ ಎಸ್.ಎಸ್. ಪಾಟೀಲ್: ಈಗ ನಾನು ಅವರಿಗೇ ಹೇಳುತ್ತಿದ್ದೇನೆ. ನೀವು ಆ ಕಮಿಟಿಯಲ್ಲಿದ್ದರೂ, ಅವತ್ತು ನಿಮಗೆ ಧ್ವನಿ ಎತ್ತಲು ಆಗಲಿಲ್ಲ. ಮನಸ್ಸು ಇಲ್ಲದಿದ್ದರೂ ನೀವು ಅವತ್ತು ಸುಮ್ಮನೆ 'ಹೂ' ಎಂದಿದ್ದೀರಿ.

ಅಧ್ಯಕ್ಷರು: ಇಲ್ಲ, ಅಂಡಾಬ್ದೇನೂ ಇಲ್ಲ. ಆಗಲೇ ಲ್ಯಾಂಡ್ ರಿಫಾರ್ಮ್ಸ್ ಆಗಬೇಕು ಎಂದು ಮುಂದುವರೆದಂಥವರು ನಾವು. 1000-2000 ಎಕರೆಗಳನ್ನು ಇಟ್ಟುಕೊಂಡಿರುವಂಥ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಅದನ್ನು ಅಪೋಸ್ ಮಾಡಿದರು. 1972ರಲ್ಲಿ ನಾವೆಲ್ಲಾ ಲ್ಯಾಂಡ್ ರಿಫಾರ್ಮ್ಸ್ ಪರವಾಗಿದ್ದೆವು.

ಶ್ರೀ ಹೆಚ್.ಎಂ. ರೇವಣ್ಣ: ಇಡೀ ರಾಷ್ಟ್ರದಲ್ಲಿ, ನಮ್ಮ ಕರ್ನಾಟಕ ಒಂದರಲ್ಲೇ ಯಾವುದೇ ನಿಬಂಧನೆ ತೊಂದರೆಯಿಲ್ಲದೆ ಭೂಹೀನರಿಗೆ ಭೂಮಿ ಸಿಕ್ಕಿರತಕ್ಕಂಥಾದ್ದು. ಯಾರು ನಿಜವಾಗಿ ಉಳುಮೆ ಮಾಡುತ್ತಿದ್ದರು, ಅವರಿಗೆ ಜಮೀನನ್ನು ಕೊಟ್ಟಂಥ ಕೀರ್ತಿ ಕರ್ನಾಟಕದ್ದು. ನೀವು ಲ್ಯಾಂಡ್‌ಲಾರ್ಡ್‌ಗಳ ಬಗ್ಗೆ ಮಾತನಾಡುತ್ತಿದ್ದೀರಿ. ಮನೆಯಲ್ಲಿ ಕುಳಿತು ತಿನ್ನುವವರಿಗೆ, ಬೇರೆಯವರು ದುಡಿದು ತಗೆದುಕೊಂಡು ಹೋಗಿ ಕೂಡಬೇಕಾಗಿತ್ತೇ?

ಅಧ್ಯಕ್ಷರು: ಆಯಿತು, ಪಾಟೀಲರೇ, ಕಾಂಟ್ರೊವರ್ಸಿ ಬೇಡ, ತಾವು ಬೇಗ ಮುಗಿಸಿ.

ಶ್ರೀ ಡಿ.ಕೆ. ಶಿವಕುಮಾರ್: ಸಾರ್ವಜನಿಕ ಹಿತಾಸಕ್ತಿಯ ಕೆಲಸವನ್ನೇನಾದರೂ ಮಾಡಬೇಕೆಂದರೆ, ಅದಕ್ಕೆ ಒಂದೂಮುಕ್ಕಾ ಎಕರೆಯವರೆಗೂ ಜಮೀನನ್ನು ತೆಗೆದುಕೊಳ್ಳಲು ಅವಕಾಶವಿದ್ದು, ಅದಕ್ಕೆ ಪರ್ಮಿಷನ್ ಕೊಡುವಂಥಾದ್ದನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿದೆ. ಇದು ಸರ್ಕಾರಕ್ಕೆ ಹೋಗಬೇಕೇ ಅಥವಾ ಲೋಕಲ್ ಲೆವೆಲ್‌ನಲ್ಲೇ ತೀರ್ಮಾನ ತೆಗೆದುಕೊಳ್ಳಬೇಕೇ ಎನ್ನುವುದಷ್ಟೇ ಇದರಲ್ಲಿ ಇರುವುದು.

ಅದಕ್ಕೆ ಏಕೆ ಇಷ್ಟು ದೊಡ್ಡ ಚರ್ಚೆ? ಪಾಟೀಲರೇ, ನೀವು 109 ಇದನ್ನೆಲ್ಲಾ ಸಂಪೂರ್ಣವಾಗಿ ನೋಡಿರುವಿರೋ, ಇಲ್ಲವೋ ನನಗೆ ಗೊತ್ತಿಲ್ಲ. ರೈತರಿಗೆ 10 ಎಕರೆಯವರೆಗೆ ಮತ್ತು ಇಂಡಸ್ಟ್ರೀಗಳಿಗೆ 50 ಎಕರೆಯವರೆಗೆ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಪರ್ಮಿಷನ್ ಇದೆ. 50 ಎಕರೆಗಳವರೆಗೆ ಹೌಸಿಂಗ್ ಪ್ರಾಜೆಕ್ಟ್‌ಗಳಿಗಿದೆ, 10 ಎಕರೆಗಳವರೆಗೆ ಇನ್‌ಸ್ಟಿಟ್ಯೂಷನ್‌ಗಳಿದೆ. ಇದು ಕೇವಲ ಒಂದೂವರೆ ಎಕರೆಯನ್ನು ಪಬ್ಲಿಕ್ ಪರ್ಪಸ್‌ಗೋಸ್ಕರ ತೆಗೆದುಕೊಳ್ಳುವಂಥಾದ್ದು. ಯಾವುದಾದರೂ ಮೇಜರ್ ಇಶ್ಯು ಎಂದರೆ, ನೀವು ವಾದ ಮಾಡುವುದರಲ್ಲಿ ಅರ್ಥವಿದೆ. ಆದರೆ ಇದು ಬಹಳ ಸಿಂಪಲ್ ಆಗಿದೆ. "ಸಾರ್ವಜನಿಕ ಆವರಣಗಳು ಎಂದರೆ ರಾಜ್ಯ ಸರ್ಕಾರಕ್ಕೆ ಸೇರಿದ ಅಥವಾ ಹಂಚಿಕೆಯಾದ, ರಾಜ್ಯ ಸರ್ಕಾರದಿಂದ ಅಥವಾ ಅವರ ಪರವಾಗಿ ಗುತ್ತಿಗೆ ಆಧಾರದ ಮೇಲೆ ಕಡ್ಡಾಯ ಕೋರಿಕೆ ಮೂಲಕ ತೆಗೆದುಕೊಂಡ ಯಾವುದೇ ಆವರಣಗಳು. ಅದರಲ್ಲಿ ಕೆಳಕಂಡ ಸಂಸ್ಥೆಗಳಿಗೆ ಸೇರಿದ ಅಥವಾ ಅವುಗಳ ಪರವಾಗಿ ಗುತ್ತಿಗೆ ತೆಗೆದುಕೊಂಡ ಯಾವುದೇ ಆವರಣಗಳು ಸೇರುತ್ತದೆ" ಎಂದು ಇದೆ. ಪಬ್ಲಿಕ್ ಇಂಟರ್‌ಸ್ಟೆಗಾಗಿ, ಯಾವುದೋ ಒಂದು ಆಸ್ಪತ್ರೆ ಅಥವಾ ಪೊಲೀಸ್ ಸ್ಟೇಷನ್ ಇಂಥಾವನ್ನು ಮಾಡಲು ಇದನ್ನು ತಂದಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್: ನಾನು ಏನು ಕೇಳುತ್ತೇನೆ. ಅದನ್ನು ಬಿಟ್ಟೇ ನೀವೆಲ್ಲರೂ ಉತ್ತರ ಕೊಡುತ್ತೀರಿ. ಕಂದಾಯ ಸಚಿವರು ಈಗ ಇಲ್ಲಿ ಇಲ್ಲ. ಸುಮ್ಮನೆ ಇಲ್ಲಿ ವಾದಕ್ಕೆಂದು ಹೇಳುವುದು ಬೇಡ. ನೀವು ಹೇಳುತ್ತಿರುವುದ್ಯಾವುದೂ ನೇರವಾದ ಉತ್ತರವಲ್ಲ. ಕಂದಾಯ ಸಚಿವರು ಬರಲಿ, ಅಲ್ಲಿಯವರೆಗೆ ಇದನ್ನು ಮುಂದಕ್ಕೆ ಹಾಕಿ. ಉತ್ತರ ಕೊಡದಿದ್ದರೆ, ನೀವು ಬಹಳ ಮಂದಿ ಇದ್ದೀರಿ, ಇದನ್ನು ಪಾಸ್ ಮಾಡುವುದಾದರೆ ಮಾಡಿಕೊಳ್ಳಿ.

ಅಧ್ಯಕ್ಷರು: ಪಾಟೀಲರೇ, ಉತ್ತರ ಕೊಡುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್: ಕಂದಾಯ ಸಚಿವರು ಇರಬೇಕಾಗುತ್ತದೆ. ಸಂಬಂಧಪಟ್ಟ ಸಚಿವರು ನೇರವಾಗಿ ಉತ್ತರ ಕೊಡಬೇಕು. ಸಹಕಾರಿ ವಿಷಯವಿದ್ದರೆ, ಅವರ ಬದಲು ಬೇರೆಯವರು ಉತ್ತರ ಕೇಳಲು ಆಗುವುದಿಲ್ಲ.

ಶ್ರೀ ಹೆಚ್. ವಿಶ್ವನಾಥ್: ಬಹಳ ಗಹನವಾದುದೇನೂ ಇದರಲ್ಲಿ ಇಲ್ಲ. ನಾವು ತಂದಿರುವ ತಿದ್ದುಪಡಿಯೇ ಬೇರೆ, ನೀವು ಮಾತನಾಡುತ್ತಿರುವುದೇ ಬೇರೆ.

ಶ್ರೀ ಎಸ್.ಎಸ್. ಪಾಟೀಲ್: ನಿಮ್ಮ ಉತ್ತರವೇ ಬೇರೆ, ರಂಗನಾಥ್‌ರವರ ಉತ್ತರವೇ ಬೇರೆ, ಶಿವಕುಮಾರ್‌ರವರ ಉತ್ತರವೇ ಬೇರೆ. ಮೂರೂ ಮಂದಿ ಮಂತ್ರಿಗಳ ಉತ್ತರ ಬೇರೆಬೇರೆಯಾಗಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಮಾನ್ಯ ಅಧ್ಯಕ್ಷರೇ, ಅನೆಕ್ಷರ್‌ನಲ್ಲಿ ಕೊಟ್ಟಿರುವ ಸೆಕ್ಷನ್ ಅನ್ನು ಓದಿದರೆ ಸ್ವಲ್ಪ ಕ್ಲಾರಿಫೈ ಆಗುತ್ತದೆ.

> "(1-A) Notwithstanding anything contained in sub-section (1), the State Government may in public interest and for reasons to be recorded in writing, by notification and subject to the provisions of the Karnataka Town and Country Planning Act, 1961

(Karnataka Act No. 11 of 1963) and such restrictions and conditions as may be specified by it, exempt any extent of land from the provisions of sections 63, 79A, 79-B or 80 for any specific purpose.

ಅಂದರೆ, ಕರ್ನಾಟಕ ಟೌನ್ ಪ್ಲಾನಿಂಗ್ ಅಂಡ್ ಕಂಟ್ರಿ ಆಕ್ಟ್‌ನಲ್ಲಿ ಏನು ರಿಸ್ಟ್ರಿಕ್ಷನ್ಸ್ ಬರುತ್ತವೆ ಅದನ್ನು ಎಕ್ಸ್‌ಪ್ಲೈನ್ ಮಾಡಬೇಕಿತ್ತು. ಅದನ್ನು ಬಿಟ್ಟು ಇಡೀ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಬಗ್ಗೆ ಚರ್ಚೆ ಮಾಡಿದರೆ ಯಾರಿಗೂ, ಏನೂ ಅರ್ಥವಾಗುವುದಿಲ್ಲ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಬಗ್ಗೆ ಚರ್ಚೆ ಮಾಡುವುದಕ್ಕಿಂತ ಇಲ್ಲಿ ಅನೆಕ್ಷರ್‌ನಲ್ಲಿ ಕೊಟ್ಟಿರುವ ರಿಸ್ಟ್ರಿಕ್ಷನ್ಸ್ ಹೇಳಿಬಿಟ್ಟಿದ್ದರೆ ಸಮಸ್ಯೆ ಪರಿಹಾರವಾಗುತ್ತಿತ್ತು.

ಶ್ರೀ ಕೆ. ಶ್ರೀನಿವಾಸಗೌಡ (ಕುಮಟವನಹಳ್ಳಿ): ಬಹಳಷ್ಟು ಕಡೆ ಸ್ಮಶಾನಗಳಿಗೂ ಜಾಗ ಬೇಕಾಗಿದೆ. ಪಬ್ಲಿಕ್ ಪರ್ಪಸ್ ಎಂದರೆ ಅದರಲ್ಲಿ ಸ್ಮಶಾನವನ್ನೂ ಸೇರಿಸಿಕೊಳ್ಳುವ ಹಾಗೆ ಮಾಡಿ. ಏಕೆಂದರೆ, ಬಹಳಷ್ಟು ಹಳ್ಳಿಗಳಲ್ಲಿ ಸ್ಮಶಾನಗಳಿಲ್ಲದೆ, ಪ್ರತಿದಿವಸವೂ ಗಲಾಟೆಗಳಾಗುತ್ತಿವೆ. ಅಂಥಾದ್ದಕ್ಕೆಲ್ಲಾ ಇದನ್ನು ಉಪಯೋಗಿಸುವುದಾದರೆ, ಇದು ಅಗಬಹುದು ಎಂದು ನನಗನ್ನಿಸುತ್ತದೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ: ಅರ್ಧ ಹೆಕ್ಟೇರ್ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸರ್ಕಾರ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಡಬೇಕು ಎನ್ನುವ ಪ್ರಸ್ತಾವನೆಯನ್ನು ಏನು ತಂದಿದೆ, ಇದರ ಬಗ್ಗೆ ನಾನು ಸರ್ಕಾರದಲ್ಲಿ ಒಂದೇ ಒಂದು ಸ್ಪಷ್ಟೀಕರಣ ಬಯಸುವುದು ಏನೆಂದರೆ, ಸಾರ್ವಜನಿಕ ಉದ್ದೇಶಗಳು ಎಂದರೆ ಅದು ಯಾವ್ಯಾವುವು ಎಂಬುದನ್ನು ಈ ಸದನಕ್ಕೆ ತಿಳಿಸಬೇಕು.

ಅಧ್ಯಕ್ಷರು: ಸ್ಕೂಲುಗಳು, ಆಸ್ಪತ್ರೆಗಳು ಇತ್ಯಾದಿಗಳು.

†ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ: ಯಾವ್ಯಾವುದು ಎನ್ನುವುದನ್ನು ಅವರು ಹೇಳಲಿ. ಎರಡನೆಯದಾಗಿ, ಇದು ದುರುಪಯೋಗವಾಗದ ಹಾಗೆ ಸರ್ಕಾರ ಯಾವ ರೀತಿ ಕಡಿವಾಣ ಹಾಕುತ್ತದೆ ಎಂದು ಹೇಳಬೇಕು. ಈ ರೀತಿಯ ಸಾರ್ವಜನಿಕ ಹಿತಾಸಕ್ತಿಯನ್ನು ಬಯಸಿ ಸರ್ಕಾರಕ್ಕೆ ಎಷ್ಟು ಅರ್ಜಿಗಳು ಈಗಾಗಲೇ ಬಂದಿವೆ ಎಂಬುದನ್ನು ಹೇಳಬೇಕು. ಕಳೆದ ವರ್ಷ, ಅದರ ಹಿಂದಿನ ವರ್ಷ ಮತ್ತು ವರ್ಷದಿಂದ ವರ್ಷಕ್ಕೆ ಎಷ್ಟು ಅರ್ಜಿಗಳು ಬರುತ್ತಿವೆ. ಕ್ಯಾಬಿನೆಟ್‌ಗೆ ಹೋಗಿ ಮಂಜೂರಾಗುವಂಥಾದ್ದು ಮೊದಲಿನಿಂದ ನಡೆದುಕೊಂಡು ಬಂದಿದೆ. ಇದನ್ನು ಸ್ಪೀಡ್-ಅಪ್ ಮಾಡಿಸಲು ಸರ್ಕಾರ ಏಕೆ ತ್ರಮ ತೆಗೆದುಕೊಳ್ಳಬಾರದು? ಜಿಲ್ಲಾಧಿಕಾರಿಗಳಿಗೆ ಏಕೆ ಅಧಿಕಾರ ಕೊಡಬೇಕು ಎಂಬುದನ್ನು ಯೋಚನೆ ಮಾಡಬೇಕು. ವಿಳಂಬವಾಗುತ್ತದೆ, ಇಲ್ಲಿ ಕಾಗದಪತ್ರಗಳು ಓಡಾಡುವುದು ತೊಂದರೆಯಾಗುತ್ತದೆ ಎನ್ನುವುದು ಒಂದೇ ಕಾರಣವೂ ಅಥವಾ ಜಿಲ್ಲಾಧಿಕಾರಿಗಳಿಗೆ ಯಾವುದಾದರೂ ರೀತಿಯಲ್ಲಿ ಅಧಿಕಾರ ಕೊಡಬೇಕು ಎಂದು ಇದನ್ನು ಮಾಡುತ್ತಿರುವಿರಾ? ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಅಧಿಕಾರವನ್ನು ಅಲ್ಲಿ ಪಡೆದುಕೊಳ್ಳುವ ಮೂಲಕ ಜಿಲ್ಲಾಧಿಕಾರಿಗಳಿಗೆ ಒತ್ತಡ ತಂದು ಕೆಲಸ ಮಾಡಿಸಿಕೊಳ್ಳುವಂಥ ಪ್ರಯತ್ನ ಇದಾಗಬಹುದು ಎಂದು ಹೇಳುತ್ತೇನೆ. ಇದು ಎಲ್ಲಾ ಕಡೆಯೂ ಆಗುತ್ತದೆ ಎಂದು ಅಲ್ಲ. ಏಕೆಂದರೆ ಕ್ಯಾಬಿನೆಟ್‌ಗೆ ಒತ್ತಡ ತರುವುದು ಕಷ್ಟ. ಆದರೆ ಜಿಲ್ಲಾಧಿಕಾರಿಗಳಿಗೆ ಒತ್ತಡ ತರುವಂತೆ ಎಲ್ಲಾ ಜಿಲ್ಲಾ ಮಂತ್ರಿಗಳಿಗೂ ತರಬಹುದು.

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

12.00 ಪಿಎಂ

ಇದನ್ನು ತಂದು ನೀವು ಯಾರೋ ಮಾಡುತ್ತೀರಿ ಎಂದು ನಾನು ಹೇಳುತ್ತಿಲ್ಲ. ಮುಂದಿನ ದಿನಗಳಲ್ಲಿ ಹೀಗೆ ಆಗುವ ಸಾಧ್ಯತೆ ಜಾಸ್ತಿ ಇವೆ. ಹಾಗಾಗಿ ಕ್ಯಾಬಿನೆಟ್‌ಗೆ ಬರಲಿ, ಆಗ ಪ್ರೊಸೀಜರ್‌ನ ಸ್ವೀಡ್‌ಅಪ್ ಅನ್ನು ಹೇಗೆ ಮಾಡಿಸಬೇಕೋ ಅದನ್ನು ಮಾಡಲಿ. ಈಗ ಎಲ್ಲಿ ಯಾವ ದೋಷ ಇದೆಯೋ ಆ ದೋಷವನ್ನು ಕಂಡುಹಿಡಿಯಬೇಕೇ ಹೊರತು ಮತ್ತೊಂದು ಪರಿಹಾರವನ್ನು ಹುಡುಕಲಿಕ್ಕೆ ಹೋಗಿ ಇನ್ನಷ್ಟು ಇಕ್ಕಟ್ಟಿಗೆ ಸಿಲುಕುವಂಥ ಇದರೊಳಗೆ ಇನ್ಯಾರೋ ಬಡವರು ಪಾಪ ಮುಗ್ಧರು ರೈತರು ಅವರು ಇದಕ್ಕೆ ಬಲಿಯಾಗುವಂಥ ಸಂದರ್ಭಗಳು ಬರಬಹುದು. ಹಾಗಾಗಿ ನೀವು ಫೈಲ್ ಅನ್ನು "Most Urgent" ಎಂದು red flag ಹಾಕಿ ಕಳುಹಿಸುತ್ತೀರಲ್ಲಾ, ಈ ರೀತಿ ಸಾರ್ವಜನಿಕ ಹಿತಾಸಕ್ತಿ ಇರುವುದನ್ನು ಜಿಲ್ಲಾಧಿಕಾರಿಗಳು ಮೂರು ದಿವಸದಲ್ಲಿ ರೆವಿನ್ಯೂ ಕಮೀಷನರ್‌ಗೆ ಕಳುಹಿಸಬೇಕು. ರೆವಿನ್ಯೂ ಕಮಿಷನರ್ ಸೆಕ್ರೆಟರಿಗೆ ಕಳುಹಿಸಬೇಕು. ಸೆಕ್ರೆಟರಿ ಕ್ಯಾಬಿನೆಟ್‌ಗೆ ಕಳುಹಿಸಬೇಕೆಂದು ಏನು ಪ್ರೊಸೀಜರ್ ಇದೆ ಅದನ್ನು ಮಾಡಿ. ಅವರು ಒಂದು ತಿಂಗಳೊಳಗೆ ಆ ಪ್ರೊಸೀಜರ್ ಅನ್ನು fulfil ಮಾಡಬೇಕು. ಹಾಗೆ ಮಾಡಬೇಕೇ ಹೊರತು ಜಿಲ್ಲಾಧಿಕಾರಿಗಳಿಗೆ ಕೊಟ್ಟರೆ, ಸರ್ಕಾರದ್ದು ಉದ್ದೇಶ ಒಳ್ಳೆಯದು ಇರಬಹುದು, ಇದೆ. ಆದರೆ ಅದು ಮುಂದೆ ದುರುಪಯೋಗ ಆಗಬಹುದು. ಇದರಿಂದ ದುರುಪಯೋಗಗಳು ಆಗುವುದಕ್ಕೆ ಅವಕಾಶಗಳು ಜಾಸ್ತಿ ಆಗುತ್ತವೆ. ಈಗ ನನ್ನ ಕಡೆಯಿಂದ ಒಂದೇ ಪಾಯಿಂಟ್ ಹೇಳುವಂಥದ್ದು ಪ್ರೊಸೀಜರ್ ಅನ್ನು ಸ್ವೀಡ್‌ಅಪ್ ಆಗುವ ಹಾಗೆ ಮಾಡಿ. ಇದರಿಂದ ಇದರ ದುರುಪಯೋಗ ಕಡಿಮೆಯಾಗಬಹುದು. ಅಲ್ಲಿ ಜಿಲ್ಲಾಧಿಕಾರಿಗಳಿಗೆ ಈ ಅಧಿಕಾರವನ್ನು ಕೊಟ್ಟರೆ ರಾಜಕೀಯ ಒತ್ತಡಗಳ ಕಾರಣದಿಂದ ಜಿಲ್ಲಾಧಿಕಾರಿಗಳು ಬೇರೆ ರೀತಿಯಲ್ಲೂ ಈ ಜಮೀನನ್ನು ಅಕ್ವೆಯರ್ ಮಾಡಿಕೊಳ್ಳುವಂಥದ್ದು ಆಗಬಹುದು. ನಾನು ಉತ್ತರ ಕನ್ನಡ ಜಿಲ್ಲೆಯವನಾಗಿದ್ದು ನಮ್ಮಲ್ಲೂ ಅರಣ್ಯ ಇದೆ, ಇದು ಎಷ್ಟು ಕಷ್ಟವಾಗುತ್ತದೆಂದು ಮಾನ್ಯ ಅರಣ್ಯ ಸಚಿವರು ಹೇಳಿದಂತೆ ಇದು ನನಗೂ ಗೊತ್ತಿದೆ. ಆದ್ದರಿಂದ ಆ ಪ್ರೊಸೀಜರ್ ಅನ್ನು ಸ್ವೀಡ್‌ಅಪ್ ಮಾಡುವುದಕ್ಕೆ ಏನು ಬೇಕೋ ಅದನ್ನು ಮಾಡಬೇಕು. ಇದರ ಬಗ್ಗೆ ಇನ್ನಷ್ಟು ಹೆಚ್ಚು ಕೂಲಂಕಷವಾಗಿ ಚರ್ಚೆ ಆಗಬೇಕು. ಸರ್ಕಾರ ಜವಾಬ್ದಾರಿಯುತವಾಗಿ ಚಿಂತನೆಯನ್ನು ಮಾಡಬೇಕೆಂದು ಹೇಳುತ್ತಾ, ಸಾರ್ವಜನಿಕ ಹಿತಾಸಕ್ತಿಗಳನ್ನು ಬಯಸಿರುವಂಥ ಪ್ರಕರಣಗಳು ಎಷ್ಟು ಬಂದಿತ್ತು ಇತ್ಯಾದಿಗಳನ್ನು ಹೇಳಲಿ. ನಮ್ಮ ಈ ಪ್ರಕರಣಗಳಲ್ಲಿ ಈ ವಿಳಂಬ ಆಗುವುದಕ್ಕೆ ಯಾರ್ಯಾರು ಕಾರಣರಿದ್ದರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ. ಡೆಪ್ಯುಟಿ ಕಮಿಷನರ್ ಪ್ರಪೋಸಲ್ ಕಳುಹಿಸುವುದಕ್ಕೆ ವಿಳಂಬ ಮಾಡಿದರೆ ಅವರ ಮೇಲೆ ಹೇಳಿ, ರೆವಿನ್ಯೂ ಸೆಕ್ರೆಟರಿಯೋ ರೆವಿನ್ಯೂ ಕಮಿಷನರೋ ಅಥವಾ ಚೀಫ್ ಸೆಕ್ರೆಟರಿಯೋ ಎಲ್ಲಿ ಅದು ವರ್ಷಗಟ್ಟಲೆ ಹೆಲ್ಡ್‌ಅಪ್ ಆಗಿತ್ತು, ಅದಕ್ಕೆ ಯಾರು ಕಾರಣರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಲಿ. ಅವರ ಯಾರ ಮೇಲೆಯೂ ಕ್ರಮವನ್ನು ತೆಗೆದುಕೊಳ್ಳುವುದನ್ನು ಬಿಟ್ಟು ನಿಮ್ಮ ಚೀಫ್ ಸೆಕ್ರೆಟರಿ, ರೆವಿನ್ಯೂ ಕಮಿಷನರ್ ರೆವಿನ್ಯೂ ಸೆಕ್ರೆಟರಿಯಿಂದ ಹಿಡಿದು ಎಲ್ಲೆಲ್ಲಿ ಆ ಪ್ರೊಸೀಜರ್ ಲ್ಯಾಪ್ಸ್ ಆಗಿದೆ ಅದನ್ನು ತಡೆಹಿಡಿಯುವುದಕ್ಕೆ ಕ್ರಮ ತೆಗೆದುಕೊಳ್ಳುವುದನ್ನು ಬಿಟ್ಟು ಜಿಲ್ಲಾಧಿಕಾರಿಗಳಿಗೆ ಈ ಅಧಿಕಾರವನ್ನು ಹಸ್ತಾಂತರಿಸುವುದರಿಂದ ಬಹುಶಃ ಮುಂದೆ ಇದರ ದುರುಪಯೋಗ ಜಾಸ್ತಿ ಆಗಬಹುದೆಂದು ನನ್ನ ಊಹೆಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಇನ್ನೊಂದನ್ನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಸರ್ಕಾರಕ್ಕೆ ತಾವು ಸೂಚನೆ

ಕೊಡಬೇಕು. ಇವತ್ತು ಈ ಭೂ ಕಂದಾಯದ ತಿದ್ದುಪಡಿಯನ್ನು ತಂದಿದ್ದಾರೆ. ಇದರ ಕನ್ನಡದ ಪ್ರತಿ ನನ್ನ ಹತ್ತಿರ ಇದೆ. ಕನ್ನಡದ ಪ್ರತಿಯೊಳಗೆ ಇಲ್ಲಿ ನಾವು ಇದನ್ನು ಮತ್ತೆ ಇಂಗ್ಲೀಷ್‌ಗೆ ಪರಿವರ್ತನೆ ಮಾಡಿಕೊಳ್ಳಬೇಕಾಗುತ್ತದೆ. ಅಂದರೆ ಇಂಗ್ಲೀಷ್‌ನಿಂದ ಕನ್ನಡಕ್ಕೆ ಕನ್ನಡದಿಂದ ಇಂಗ್ಲೀಷ್‌ಗೆ. ಡೆಪ್ಯುಟಿ ಕಮಿಷನರ್ ಎನ್ನುವುದಕ್ಕೆ ಜಿಲ್ಲಾಧಿಕಾರಿಗಳು ಎಂದು ಕನ್ನಡದಲ್ಲಿ ಶಬ್ದ ಇಲ್ಲವೇ? ಇಲ್ಲಿ ಅರ್ಧ ಹೆಕ್ಟೇರ್ ಎನ್ನುವುದನ್ನು ಕನ್ನಡದಲ್ಲಿ ಬರೆಯುವುದಕ್ಕೆ ಬರುವುದಿಲ್ಲವೇ? ಈ ಬಿಲ್ ಅನ್ನು ಕನ್ನಡದಲ್ಲಿ ಮಾಡಿಕೊಟ್ಟಿದ್ದಾರೆ. ಮತ್ತೆ ಇದನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕು ಆ ರೀತಿ ಪರಿಸ್ಥಿತಿ ಇದೆ. ಆದ್ದರಿಂದ ಸರ್ಕಾರದಲ್ಲಿ ಕನ್ನಡಕ್ಕೆ ತರ್ಜುಮೆ ಮಾಡುವವರಿಗೆ ಅದನ್ನು ಹೇಳಬೇಕು. ಮತ್ತೆ ಇದರ ಬಗ್ಗೆ ಇನ್ನಷ್ಟು ಹೆಚ್ಚು ಚರ್ಚೆ ಆಗಬೇಕೆಂದು ನನಗನ್ನಿಸುತ್ತದೆ. ಸರ್ಕಾರ ಇದನ್ನು ಇನ್ನಷ್ಟು ಚರ್ಚೆಗೆ ಒಳಪಡಿಸಿದರೆ ಒಳ್ಳೆಯದು.

†ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿನಂತಿ ಏನೆಂದರೆ ಸೆಕ್ಷನ್ 109ಗೆ ಏನು ಅಮೆಂಡ್‌ಮೆಂಟ್ ತಂದಿದ್ದಾರೆ ಇದರಲ್ಲಿ ಮಾನ್ಯ ಹೆಗಡೆಯವರು ಹೇಳಿರತಕ್ಕಂಥ ಒಂದು ವಿಚಾರ ಬೇರೆ, ಇದನ್ನು ನೇರವಾಗಿ ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಡುವುದು ಬಹಳ ಸೂಕ್ತ ಏಕೆಂದರೆ ಯಾವುದೇ ಒಂದು ಸಾರ್ವಜನಿಕ ಹಿತದೃಷ್ಟಿಯಿಂದ ಅದು ಆಸ್ಪತ್ರೆಗೆ ಭೂಮಿ ಬೇಕಾದರೆ, ಶಾಲಾ ಕಟ್ಟಡಗಳಿಗೆ ಭೂಮಿ ಬೇಕಾದರೆ, ರುದ್ರಭೂಮಿಗೆ ಭೂಮಿ ಬೇಕಾದರೆ ಖಾಸಗಿ ಶಿಕ್ಷಣ ಸಂಸ್ಥೆಗಳು ಉದಾಹರಣೆಗೆ ನಮ್ಮ ರಾಯಚೂರು ಜಿಲ್ಲೆಯಲ್ಲಿ ಒಂದು ಕೇಸ್‌ನ ವಿಚಾರದಲ್ಲಿ ಅದಕ್ಕೆ ಒಂದು ಪ್ರೊಫಾರ್ಮ ಇದೆ. ಆ ಪ್ರೊಫಾರ್ಮದೊಳಗೆ ಡಾಕ್ಯುಮೆಂಟೇಷನ್ ರೆಕಮಂಡೇಷನ್ ಮಾಡಿಸಿ ಡಿ.ಸಿ. ಕಡೆಯಿಂದ ಕಳುಹಿಸಿದರೆ 109ಕ್ಕೆ ಪರ್ಮಿಷನ್ ಕೊಡಿಸಬೇಕಾದರೆ ಸತತವಾಗಿ 3 ವರ್ಷವಾಯಿತು. ಈಗ ಏನು ಶ್ರೀ ವಿಶ್ವೇಶ್ವರ ಹೆಗಡೆಯವರು ಇಲ್ಲಿಯವರೆಗೆ ಪ್ರಸ್ತಾಪ ಮಾಡಿದರು ಇದರ ಬದಲು ನೇರವಾಗಿ ಒಂದೂವರೆ ಹೆಕ್ಟೇರ್ ಬದಲು 5 ಎಕರೆವರೆಗೂ ಜಿಲ್ಲಾಧಿಕಾರಿಗಳಿಗೆ ಅವಕಾಶ ಕೊಟ್ಟು ತೀವ್ರಗತಿಯಲ್ಲಿ ಇತ್ಯರ್ಥ ಮಾಡುವುದಕ್ಕೆ ಅವಕಾಶ ಒದಗಿಸಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ಶ್ರೀ ಹಂಪನ ಗೌಡರು ಹೇಳಿದ ಹಾಗೆ ಇದರ ಅಗತ್ಯ ಇದೆ. ಏಕೆಂದರೆ ಕಡತಗಳು ಬೆಂಗಳೂರಿಗೆ ಬಂದು ಕ್ಯಾಬಿನೆಟ್‌ಗೆ ಹೋಗಿ ವಾಪಸ್ಸು ಹೋಗುವಾಗ ಬಹಳ ತಡವಾಗುತ್ತದೆ. ಅತೀ ಶೀಘ್ರದಲ್ಲಿ ಇದನ್ನು ವಿಲೇವಾರಿ ಮಾಡಬೇಕು ಕನ್‌ವರ್ಶನ್ ಮಾಡಬೇಕಂತಾದರೆ ಮಾನ್ಯ ಸಭಾಪತಿಯವರು ಹೇಳಿದ ಹಾಗೆ ನಮ್ಮ ಒಂದು ಟರ್ಮ್ ಮುಗಿಯುತ್ತದೆ. ಇದರ ಅಗತ್ಯ ಇದೆ, ಇದನ್ನು ಪಾಸ್ ಮಾಡಬೇಕಾಗುತ್ತದೆ. ಇನ್ನು ಈ ಬಿಲ್‌ನ ಕನ್ನಡ ದರ್ಶನ್‌ನಲ್ಲಿ ಜಿಲ್ಲಾಧಿಕಾರಿಗಳು ಎನ್ನುವ ಕಡೆ ಡೆಪ್ಯುಟಿ ಕಮಿಷನರ್ ಎಂದು ಹಾಕಿದ ಹಾಗೆ ಮೊನ್ನೆ ಕೃಷಿ ಉತ್ಪನ್ನ ಮಾರುಕಟ್ಟೆ ಸಚಿವರು ತಂದಿದ್ದಂಥ ಬಿಲ್‌ನಲ್ಲಿ ಅದೇ ತರಹ ಎಂದರೆ 'ಮಾರ್ಕೆಟ್ ಪೀಚ್' ಎಂದು ಇದೆ. ಅಂದರೆ ನೀವು ತಂದಿದ್ದಂಥ ಬಿಲ್‌ನಲ್ಲಿಯೂ ಸ್ವಲ್ಪ ಬದಲಾವಣೆ ಮಾಡಬೇಕಾಗುತ್ತದೆ. ಮಾರ್ಕೆಟ್ ಪೀಜನ್ನು ಎಂದು ಹಾಕಿದ್ದೀರಿ. ಅದನ್ನು ಸ್ವಲ್ಪ ಬದಲಾವಣೆ ಮಾಡಬೇಕು.

†ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಜಿಲ್ಲಾಧಿಕಾರಿಗಳನ್ನು ನಾಳೆ ದುರುಪಯೋಗ ಮಾಡಿಕೊಳ್ಳತಕ್ಕಂಥದ್ದು ಇದೆ ಎನ್ನತಕ್ಕಂಥದ್ದನ್ನು ಹೇಳಿದರು. ಈಗ ಸಧ್ಯ ಆಗಿರುವ ಒಂದು

† ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಹಾಗೂ ಟಿಪ್ಪಣಿಗಳನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.

ಉದಾಹರಣೆಯನ್ನು ಹೇಳುತ್ತೇನೆ. ಸರ್ಕಾರಿ ಜಾಗ ಇದ್ದರೆ ಸರ್ಕಾರಿ ಸಂಸ್ಥೆಗೆ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಅಧಿಕಾರ ಇದೆ. ನಮ್ಮ ಗದಗ್‌ನ ನಾಗಾವಿ ಎನ್ನುವ ಊರಿನಲ್ಲಿ ಸರ್ಕಾರಿ ದವಾಖಾನೆಗೆ ಕಟ್ಟಡ ಕಟ್ಟಬೇಕಾಗಿತ್ತು. ಆ ಕಟ್ಟಡ ಕಟ್ಟುವುದಕ್ಕೆ ಒಂದು ಜಾಗವನ್ನು propose ಮಾಡಿ ಪಂಚಾಯತ್‌ನವರು ಠರಾವು ಮಾಡಿ ಅದನ್ನು ಕಳುಹಿಸಿದ್ದರು. ಕಳುಹಿಸಿದರೆ ಅದನ್ನು ಯಾರೋ ಒಂದು ಪಕ್ಷದವರು ಬಂದು ಅಲ್ಲಿ ಬೇಡ ಇಲ್ಲಿ ಆಗಬೇಕೆಂದು ಹೇಳಿ ಜಿಲ್ಲಾಧಿಕಾರಿಗಳಿಗೆ ಫೋನ್ ಮಾಡಿ ನಿಲ್ಲಿಸಿಬಿಟ್ಟರು. ಇಬ್ಬರು ಜಿಲ್ಲಾಧಿಕಾರಿಗಳು ಬಂದರು. ಇದು ದುರ್ದೈವದಿಂದ ನಡೆಯತಕ್ಕಂಥದ್ದು ಈ ರೀತಿ ಆಗುವುದಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇವತ್ತು ನಮ್ಮಲ್ಲಿಯೇ ಆಗಿರುವಂಥದ್ದು ನಮಗೆ ಗೊತ್ತಿದೆ. ಮೂರು ವರ್ಷ ಆಯಿತು, ಆ ಒಂದು ಬಿಲ್ಡಿಂಗ್ ಕಟ್ಟಲಿಕ್ಕೆ ಜಿಲ್ಲಾ ಪಂಚಾಯತ್‌ನವರು ದುಡ್ಡು ಇಟ್ಟಿದ್ದಾರೆ, ಬಿಲ್ಡಿಂಗ್ ಕಟ್ಟುವುದಕ್ಕೆ ಜಾಗ ಕೊಡುತ್ತಿಲ್ಲ. ಏಕೆಂದರೆ ಒಂದು ಪಕ್ಷದವರು ಅಲ್ಲಿ ಕಟ್ಟುವುದು ಬೇಡ ಎಂದು ಹೇಳುತ್ತಾರೆ. ಒಳ್ಳೆಯ ಜಾಗ ಇದ್ದರೂ ಬೇಡ, ಒಂದು ಸ್ಮಶಾನದಲ್ಲಿ ಕಟ್ಟಿ ಅನ್ನುವುದಕ್ಕೆ ನಿಲ್ಲಿಸಿಬಿಟ್ಟಿದ್ದಾರೆ. ಜಿಲ್ಲಾಧಿಕಾರಿಗಳು ಇಬ್ಬರೂ ಇದೇ ಜಾಗದಲ್ಲಿ ಕಟ್ಟಬೇಕೆಂದು ಹೇಳುತ್ತಾರೆ. ಆದರೆ ಅದನ್ನು ನಿಲ್ಲಿಸಿದ್ದಾರೆ. ದುರುಪಯೋಗ ಆಗುತ್ತದೆಂದು ಹೇಳಿದ್ದೀರಲ್ಲಾ ಅದಕ್ಕೇ ಇದು ಇವತ್ತು ನಡೆದಿರತಕ್ಕಂಥ ಉದಾಹರಣೆ, ಬೇಕಾದರೆ ಇವತ್ತು ಆ ರಿಪೋರ್ಟ್‌ನ್ನು ತರಿಸಿಕೊಳ್ಳಿ ಆಗ ನಿಮಗೇ ಗೊತ್ತಾಗುತ್ತದೆ. ಒಂದು ಬಿಲ್ಡಿಂಗ್ ಕಟ್ಟಿಕೊಳ್ಳುವುದಕ್ಕೆ ಆಗದೆ 4 ವರ್ಷವಾಯಿತು ಇದು ಕೂಡ ದುರುಪಯೋಗವಾಗುವಂಥ ಚಾನ್ಸಸ್ ಇರುತ್ತದೆ.

ಶ್ರೀ ಸಿ.ಚನ್ನಿಗಪ್ಪ (ಕೊರಟಗೆರೆ): ಮಾನ್ಯ ಅಧ್ಯಕ್ಷರೆ, ನಮ್ಮ ನೆಲಮಂಗಲ ತಾಲ್ಲೂಕಿನ ಕರೇನಹಳ್ಳಿ ಎಂಬ ಗ್ರಾಮದಲ್ಲಿ ಸರ್ವೆ ನಂಬರ್ 66, 68ರಲ್ಲಿ ಅಲ್ಲಿ ಸರ್ಕಾರಿ ಜಾಗ ಇತ್ತು ಯಾರಿಗೆ ಸೈಟ್ ಇಲ್ಲ ಅವರಿಗೆ ಆ ಸರ್ಕಾರಿ ಗೋಮಾಳದಲ್ಲಿ ಕೊಡಿ ಎಂದು ಹೇಳಿ ಅಲ್ಲಿ ಆವತ್ತು ಸರ್ಕಾರ ಆದೇಶ ಮಾಡಿದೆ. ಇದು ನಮ್ಮ ಮಾನ್ಯ ರೇವಣ್ಣ ಸಾಹೇಬರಿಗೆ ಚೆನ್ನಾಗಿ ಗೊತ್ತಿರುವ ವಿಚಾರ, ಆ ಪ್ರಕಾರ ನಾವು ಕಮಿಟಿಯಲ್ಲಿ ಇಟ್ಟುಕೊಂಡು, ಮಾನ್ಯ ಅಂಜನಾಮೂರ್ತಿಯವರು ಅದನ್ನು ಕಮಿಟಿಯಿಂದ ಬಿಡುಗಡೆ ಮಾಡಿಕೊಟ್ಟರು. ಮೊನ್ನೆ ನಾವು ಗ್ರಾಮಸಭೆ ಕರೆದು ಸೈಟ್ ಹಂಚುವುದಕ್ಕೆ ಹೋದರೆ 1438 ಅರ್ಜಿ ಬಂದಿದೆ, ಅಲ್ಲಿ 13 ಎಕರೆ ಜಮೀನು ಇದೆ. ಅದನ್ನು ವಶಪಡಿಸಿಕೊಳ್ಳುವುದಕ್ಕೆ ಇವತ್ತು ಡಿ.ಸಿ.ಗೆ ಆಗುತ್ತಿಲ್ಲ. ಅಲ್ಲಿಗೆ ಯಾರೋ ಒಬ್ಬರು middle man ಹೋಗಿಬಿಟ್ಟು ಇದನ್ನು ಮಾಡಕೂಡದು ಸರ್ ಆದ್ದರಿಂದ ಆ ಜಮೀನನ್ನು ಪೆಂಡಿಂಗ್ ಮಾಡಿ, ಎಂದು ಹೇಳಿದ್ದಾರೆ. ಕಮಿಟಿಯಿಂದ ಮಾಡಿದ್ದೇವೆ ಬಗರ್‌ಹುಕುಂ ಸಾಗುವಳಿ ಕಮಿಟಿಯಿಂದ ಮಾಡಿದ್ದೇವೆ, ಆಶ್ರಯ ಕಮಿಟಿಯಿಂದ ಮಾಡಿದ್ದೇವೆ, ಅಂತೂ ಕೂಡ ಇದನ್ನು ಪೆಂಡಿಂಗ್‌ನಲ್ಲಿದೆ ಎಂದು ಹೇಳಿಬಿಟ್ಟಿದ್ದಾರೆ. ಇದು ಯಾವ ಧರ್ಮ? ಇದು ಸರ್ಕಾರದ ಯಾವ ನೀತಿ? ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ರೇವಣ್ಣನವರು ನಮ್ಮ ಊರಿಗೆ ಮೊನ್ನೆ ಬಂದಿದ್ದರು. ಅಲ್ಲಿ ನಾವು ಉತ್ತಮವಾದ ಕೆರೆಯನ್ನು ನಾವು ಮಾಡಿಸಿದರೆ ಅಂದರೆ ನಾವು ಉತ್ತಮವಾದ ಕೆಲಸವನ್ನು ಮಾಡಿಸಿದ್ದರೆ ಅದನ್ನು ಕ್ವೆಶ್ಚನ್ ಮಾಡುತ್ತಾರೆ. ಅಂಥ ಕ್ಯೂಶ್ಯನ್ ಹಾಕುವವರನ್ನು ಇಟ್ಟರೆ ಈ ರಾಜ್ಯ ಕ್ಷಮಿಸುವುದಿಲ್ಲ. ನಮ್ಮ ಕಾನ್ಸ್ಟ್ಟ್ಯೂಷನ್‌ನವರು ಕ್ಷಮಿಸುವುದಿಲ್ಲ. ನಾನು ತಮ್ಮ ಮುಖಾಂತರ ವಿನಂತಿ ಮಾಡುವುದೇನೆಂದರೆ ದಯವಿಟ್ಟು ಸರ್ಕಾರಿ ಗೋಮಾಳ ಜಮೀನುಗಳು ಎಲ್ಲಿಯೇ ಇರಲಿ ಅದು ಯಾವುದೇ ಊರಿನಲ್ಲಿ ಇರಲಿ ಆಶ್ರಯ ಕಮಿಟಿಗೆ ಹತ್ತಿರ ಇದ್ದರೆ, ಕೂಡಲೇ ಜಿಲ್ಲಾಧಿಕಾರಿಗಳು ಅದನ್ನು ಹ್ಯಾಂಡ್‌ಓವರ್

ಮಾಡುವ ರೀತಿಯಲ್ಲಿ ತಾವು ಈ ಅಮೆಂಡ್‌ಮೆಂಟ್‌ನ್ನು ತರಬೇಕೆಂದು ಹೇಳಿ ತಮ್ಮ ಮುಖಾಂತರ ಮಾನ್ಯ ಸಚಿವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ವಿಶ್ವನಾಥ್ (ಸಹಕಾರ ಸಚಿವರು) (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೇ, ತಿದ್ದುಪಡಿ ಸರಳ ಆಗಿದ್ದರೂ ಕೂಡ ಬಹಳ ಸುದೀರ್ಘವಾಗಿ ಚರ್ಚೆ ಆಗಿದೆ. ಇದು ನಮ್ಮ ಪುಣ್ಯನೋ ಏನೋ, ಏನಾದರೂ ತೆಗೆದುಕೊಂಡು ಬಂದರೆ ಬಹಳ ದೊಡ್ಡ ಚರ್ಚೆಯಾಗಿಬಿಡುತ್ತದೆ. ಇದು ಭೂಸ್ವಾಧೀನದ ತಿದ್ದುಪಡಿ ಅಲ್ಲ. ಭೂಮಿಯ ಉಪಯೋಗದ ಅಧಿಕಾರವನ್ನು ಯಾರಿಗೆ ಕೊಡಬೇಕು ಎನ್ನತಕ್ಕಂಥದ್ದರ ಬಗ್ಗೆ ತಿದ್ದುಪಡಿ ತಂದಿದ್ದೇವೆ. ಪ್ರಸ್ತುತ ಇರುವಂಥ ಕಾನೂನಿನ ಅಡಿಯಲ್ಲಿಯೇ ಸರ್ಕಾರಕ್ಕೆ ಇದ್ದಂಥ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ವರ್ಗಾವಣೆ ಮಾಡುವಂಥದ್ದು ಅರ್ಧ ಹೆಕ್ಟೇರ್ ಭೂಮಿಯನ್ನು ಕೊಡುವಂಥ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಡತಕ್ಕಂಥ ಸರಳ ತಿದ್ದುಪಡಿಗೆ ಈ ಕಂದಾಯ ವಿಧೇಯಕವನ್ನು ತಂದಿರುವಂಥದ್ದು, ಇದರಲ್ಲಿ ಬಹಳಷ್ಟು ಭೂಸುಧಾರಣೆಯ ಬಗ್ಗೆ ಸಹ ಚರ್ಚೆಯಾಯಿತು. ಭೂಸುಧಾರಣೆ ವಿಚಾರ ಬಂದಿರತಕ್ಕಂಥ ಸಂದರ್ಭದಲ್ಲಿ ನಾನು ಒಂದು ಹೆಸರನ್ನು ಪ್ರಸ್ತಾಪ ಮಾಡಲೇ ಬೇಕಾಗುತ್ತದೆ. ಭಾರತದಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ತಂದಂಥ ಶತಶತಮಾನಗಳಿಂದ ಹೊತ್ತು ಕೂಳಿಗೂ ಕೂಡ ಗತಿ ಇಲ್ಲದೆ ಬೆಳೆದ ದವಸವನ್ನು ಭೂಮಾಲೀಕನ ಮನೆಗೆ ಅರ್ಪಿಸಿ ವಾಪಸ್ಸು ಬರುತ್ತಿದ್ದಂಥದ್ದನ್ನು ಗೇಣೀದಾರನಿಗೆ ಕೊಟ್ಟಂಥ ಕೀರ್ತಿ ದಿವಂಗತ ದೇವರಾಜ ಅರಸುರವರಿಗೆ ಸಲ್ಲಬೇಕು. ಆದರೆ ಸ್ಮರಣೆಯನ್ನು ಕೂಡ ಇಲ್ಲಿ ಮಾಡಬೇಕಾಗುತ್ತದೆ. ಅದೇ ಚರಿತ್ರೆಯೊಂದಿಗೆ ಇದೇ ಸದನದಲ್ಲಿ ವಿರೋಧ ಪಕ್ಷದ ನಾಯಕರಾಗಿದ್ದಂಥ ದೇವೇಗೌಡರು ಸಹ ಈ ಭೂ ಸುಧಾರಣಾ ಕಾನೂನನ್ನು ಅಷ್ಟೇ vehement ಆಗಿ oppose ಮಾಡಿದ್ದೂ ಕೂಡ ಚರಿತ್ರೆಯಲ್ಲಿ ಇದೆ ಎನ್ನತಕ್ಕಂಥದ್ದನ್ನು ಹೇಳುತ್ತೇನೆ. ಭೂ ಸುಧಾರಣೆ ಸಂದರ್ಭ ಬಂದಾಗ, ಏಕೆಂದರೆ, ಎಸ್.ಎಸ್. ಪಾಟೀಲರಿಗೆ ಇದೆಲ್ಲಾ ಗೊತ್ತಾಗಬೇಕು. ಯಾರು ತಂದರು? ಯಾರು ಅನುಷ್ಠಾನಕ್ಕೆ ಕೊಟ್ಟರು? ಯಾವ ನಾಯಕರು ಇದನ್ನು ವಿರೋಧ ಮಾಡಿದರು ಎನ್ನುವುದು ಅವರ ಗಮನಕ್ಕೆ ಬರಬೇಕೆಂದು ನಾನು ಹೇಳುವುದು. ನನ್ನ ವಿನಂತಿ ಏನೆಂದರೆ, ಪಾಟೀಲರು ಬಹಳ ಹಿರಿಯರು, ಉತ್ಸಾಹದಲ್ಲಿ ಎಲ್ಲವನ್ನೂ ಪ್ರಶ್ನೆ ಮಾಡುತ್ತಿದ್ದಾರೆ. ಅವರು ರಾತ್ರಿ ಹೊತ್ತು ಶರಣ ಸಾಹಿತ್ಯ ಓದುತ್ತಾರೆ. ಅದರ ಜೊತೆಗೆ, ಸಾಮಾನ್ಯ ಕಾನೂನುಗಳನ್ನು ಸ್ವಲ್ಪ ಓದಿಕೊಳ್ಳಬೇಕು. ಏಕೆಂದರೆ, ಅವರು ಹಿರಿಯರಿದ್ದಾರೆ. ಸಚಿವರಾಗಿ ಅನುಭಾವಿತರಾಗಿದ್ದಾರೆ. ಇದರ ಜೊತೆ ಜೊತೆಗೆ ಅದೆಲ್ಲಾ ಅವರಿಗೆ ಅಗತ್ಯವಿದೆ. ಬಹಳ ಸರಳವಾಗಿ ಮುಗಿಸಬಹುದೆಂದರೆ, ಎಸ್.ಎಸ್. ಪಾಟೀಲ್ ಎಂದರೆ ಸಮಸ್ಯೆಗಳ ಸೃಷ್ಟಿಕರ್ತ ಪಾಟೀಲರೆಂದಾಗುತ್ತದೆ. ಇದು ಬಹಳ ರಳವಾಗಿದೆ. ಎಸ್.ಎಸ್. ಪಾಟೀಲರು ನಾವು ಹೇಳಿದ್ದಕ್ಕೆಲ್ಲಾ ಯೆಸ್, ಯೆಸ್ ಎನ್ನುತ್ತಾರೆಂದು ನಾವೂ ಅಂದು ಕೊಂಡೆವು. ಇವರು ಸಮಸ್ಯೆಗಳ ಸೃಷ್ಟಿಕರ್ತ ಪಾಟೀಲರಾಗಿದ್ದಾರೆ. ಇವತ್ತು ನಾವೂ ದೊಡ್ಡದಾಗಿ ಕೊಡುತ್ತಿಲ್ಲ. ಕೇವಲ ಅರ್ಧ ಹೆಕ್ಟೇರ್ ಅನ್ನು ಸಾಮಾನ್ಯ ಜನರ ಉಪಯೋಗಕ್ಕೆ ಕೊಡುತ್ತೇವೆ. ನಿಜ. ನಮ್ಮ ಕಾನೂನುಗಳ ಉಪಯೋಗವೂ, ದುರುಪಯೋಗವೂ ಆಗುತ್ತದೆ. ಅದೆಲ್ಲಾ ಇದ್ದೇ ಇರುತ್ತದೆ. ಒಮಿಷನ್ಸ್, ಕಮಿಷನ್ಸ್ ಇರುವುದು. ಡೆಮಾಕ್ರೆಟಿಕ್ ಸ್ಟೈಲ್ ಅಂಡ್ ಸೆಟ್-ಅಪ್‌ನಲ್ಲಿ ಇರುವುದು. ಎಲ್ಲೋ ಒಂದು ಆಗಿದ್ದಕ್ಕೆ ಇಡೀ ಕಾನೂನನ್ನೇ ಸರಿಯಲ್ಲ ಎಂದು ಹೇಳುವುದಲ್ಲ. ತಾವು ಸಲಹೆ ಕೊಟ್ಟಿದ್ದೀರಿ. ಆದುದರಿಂದ, ಈ ತಿದ್ದುಪಡಿಯನ್ನು ತಾವು ಅನುಮೋದನೆ ಮಾಡಿಕೊಡಬೇಕು. ಸಭೆ ಒಪ್ಪಿಕೊಳ್ಳಬೇಕೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ನಾನು ಸಮಸ್ಯೆಗಳ ಸೃಷ್ಟಿಕರ್ತ ಎಂದು ಹೇಳಿದಿರಿ. ಮೈಸೂರಿನ ಸಮಸ್ಯೆ ಹುಟ್ಟಿರುವುದೇ ಇವರು ಮಂತ್ರಿಯಾದ ಮೇಲೆ. ಇಡೀ ಮೈಸೂರು ಜಿಲ್ಲೆಯಲ್ಲಿ ಇಲ್ಲದ ಸಮಸ್ಯೆಗಳನ್ನು ಹುಟ್ಟಿ ಹಾಕಿದವರೇ ಇವರು. ಡಿ.ಕೆ. ಶಿವಕುಮಾರ್ ಆದರು. ಇಬ್ಬರೂ ಸೇರಿ, ಏನು ಸಮಸ್ಯೆ ಸೃಷ್ಟಿ ಮಾಡಿದರು, ಅಂದರೆ..... ದೇವರಿಗೇ ಗೊತ್ತು. ನೀವು ಹೋಗುತ್ತೀರಲ್ಲಾ, ಬಿಡಿಸುವುದಕ್ಕೆ.....

ಶ್ರೀ ಹೆಚ್. ವಿಶ್ವನಾಥ್: ನಾನು ವಸ್ತುಸ್ಥಿತಿ ಹಿಡಿದು ಮಾತನಾಡುತ್ತೇನೆ. ಹೊಸತನದ ಮಾತುಗಳು ಬೇರೆಯವರಿಗೆ ವಿಶ್ವನಾಥ್ ವಿವಾದಾತ್ಮಕ ಮಂತ್ರಿ ಎಂಬ ಭಾವನೆ ಬರುತ್ತದೆ. ಹಳೆಯದನ್ನೇ ಮಾತನಾಡಿದರೆ, ಯಾರೂ ಮಾತನಾಡುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್: ನಿಮ್ಮ ಪಾಲಿಗೆ ನನ್ನದೂ ಹಾಗೇ ಆಗುತ್ತದೆ. ಏಕೆಂದರೆ, ಇವರಿಗೇನೂ ಗುರುತಿಲ್ಲ. ಬಂದು ಇಲ್ಲಿ ಕುಳಿತಿದ್ದಾರೆ. ಏನೂ ಅಭ್ಯಾಸ ಮಾಡಿಕೊಂಡಿಲ್ಲ. ಆ ಇಲಾಖೆಯಲ್ಲ, ನೀವೇಕೆ ಜವಾಬ್ದಾರಿ ತೆಗೆದುಕೊಳ್ಳಬೇಕು? ನಾನು ಕೇಳಿದ್ದಕ್ಕೆ, ಇನ್ನೂ ಉತ್ತರ ಬಂದಿಲ್ಲ. ಯಾರೂ ಹೇಳಿಲ್ಲ. ಅದನ್ನು ಮುಗಿಸಿ. ಸುಮ್ಮನೆ ಎಲ್ಲರೂ ಇಲ್ಲದ ಉತ್ತರ ಹೇಳಿದರು. ನಾನು ಕೇಳಿದ್ದಕ್ಕೆ ಇನ್ನೂ ಉತ್ತರ ಬಂದಿಲ್ಲ. ಆ ಉತ್ತರ ತೆಗೆದುಕೊಂಡು ನೀವು ಮಂಜೂರು ಮಾಡಬೇಕೆಂದರೆ, ಅದು ಮಂಜೂರಾಗುವುದಿಲ್ಲ.

ಶ್ರೀ ಸಿ.ಚನ್ನಿಗಪ್ಪ: ಪಾಟೀಲರದ್ದು ಉತ್ತರ ಕನ್ನಡ ಭಾಷೆ. ನಮ್ಮ ಸಚಿವರ ಭಾಷೆ ಅಚ್ಚ ಕನ್ನಡ. ಕನ್ನಡ ನುಡಿ ಮುತ್ತು. ಅವರಿ ಅರ್ಥವಾಗಿಲ್ಲ ಅಷ್ಟೆ. ಆದರೆ, ಸಚಿವರು ಎಲ್ಲಾ ಭಾಷೆಯನ್ನೂ ಅತ್ಯುತ್ತಮವಾಗಿ 5 ವರ್ಷಗಳಲ್ಲಿ ಚೆನ್ನಾಗಿ ಮಾತನಾಡಿದ್ದಾರೆ. ಅವರ ಮಾತನ್ನು, ಕನ್ನಡದ ಕಂಪನ್ನು ರಾಜ್ಯಕ್ಕೆ ಚೆಲ್ಲಿದ್ದಾರೆ. ಅದನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ವಿಶ್ವನಾಥ್ ಬೆಂಬಲಿಗರು ಎಲ್ಲೆಲ್ಲಿದ್ದಾರೆಂಬುದೇ ಗೊತ್ತಾಗುವುದಿಲ್ಲ.

ಅಧ್ಯಕ್ಷರು: ಪ್ರಸ್ತಾಪ ಏನೆಂದರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು: ಪ್ರಸ್ತಾವ ಏನೆಂದರೆ:– "2ನೇ ಖಂಡವು ಈ ವಿಧೇಯಕದ ಅಂಗವಾಗಿರುತ್ತದೆ."

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಖಂಡ 2ಅನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ; "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು).

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್. ವಿಶ್ವನಾಥ್ (ಸಹಕಾರ ಸಚಿವರು) (ಕಂದಾಯ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2004ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು: ತಾವು ತಮ್ಮದೇ ಬೇರೆ ಬಿಲ್ ಮಂಡನೆ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್: ಸಹಕಾರಿ ಬಿಲ್ ಅನ್ನು ಮಂಜೂರು ಮಾಡಬೇಕೆಂದರೆ ಬಹುಶಃ ನನಗನ್ನಿಸುತ್ತದೆ, ಅದು ಇವತ್ತು ಮುಗಿಯುವುದಿಲ್ಲ.

ಅಧ್ಯಕ್ಷರು: ನೀವು ಸಹಕಾರ ಕೊಟ್ಟರೆ ಇವತ್ತೇ ಮುಗಿಯುತ್ತದೆ.

ಶ್ರೀ ಎಸ್.ಎಸ್. ಪಾಟೀಲ್: ಅವರು ಸಹಕಾರ ಕೊಟ್ಟರೆ ಮುಗಿಸುತ್ತೇನೆ. ತಾವು ಮಂಡಿಸಿ. ನಾನು ಕೆಲವು ಭಾಗಗಳನ್ನು ಹೇಳುತ್ತೇನೆ. ಅದಕ್ಕೆ ತಾವು ಒಪ್ಪಿದರೆ, ನಾನು ಒಪ್ಪುತ್ತೇನೆ. ಇದ್ದ ಸ್ಥಿತಿಯಲ್ಲೇ ಮಾಡಬೇಕೆಂದರೆ, ನಿನ್ನೆ ಧರಣಿ ಎಂದು ಬಂತು, ಆ ಮಟ್ಟಕ್ಕೆ ಹೋಗುತ್ತದೆ.

ಅಧ್ಯಕ್ಷರು: ಕೊನೆ ದಿವಸ ಆ ಸಂದರ್ಭ ಮಾಡಬೇಡಿ ಇವತ್ತು.

ಶ್ರೀ ಎಸ್.ಎಸ್. ಪಾಟೀಲ್: ಅದೆಲ್ಲಾ ಒಪ್ಪಿಕೊಂಡರೆ ನಾನು ಮುಗಿಸುತ್ತೇನೆ. ಕೆಲವು ಅವಶ್ಯವಿದೆ. ಅದನ್ನು ನಾನು ಹೇಳುತ್ತೇನೆ. ತಾವೂ ಹೇಳಿ. ಅದನ್ನು ಒಪ್ಪಿದರೆ ಮುಗಿಸೋಣ. ಚರ್ಚೆಯಾಗಬೇಕು, ಆ್ಯಸ್ ಇಟೀಜ್ ಬಿಲ್ ಮಂಜೂರಾಗಬೇಕೆಂದರೆ, ಅದು ಇವತ್ತು ಮುಗಿಯುವುದಿಲ್ಲ.

ಶ್ರೀ ಕೆ.ವಿಶ್ವೇಶ್ವರ ಹೆಗಡೆ ಕಾಗೇರಿ: ಸೌಹಾರ್ದಯುತವಾಗಿ ಮುಗಿಯಬೇಕಾದರೆ ಆ ಬಿಲ್ ಇವತ್ತು ಬರಬಾರದು.

ಅಧ್ಯಕ್ಷರು: ಹಾಗಾದರೆ, ಹೇಗೆ ಮುಗಿಯುತ್ತದೆ?

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ: ಇಲ್ಲವೆಂದರೆ, ಸೋಮವಾರಕ್ಕೆ ಮುಂದಕ್ಕೆ ಹಾಕಬೇಕಾಗುತ್ತದೆ.

ಅಧ್ಯಕ್ಷರು: ಇಲ್ಲ. ಸೋಮವಾರಕ್ಕೆ ಏಕೆ? ರೇವಣ್ಣನವರೆ, ತಾವು ಮುಂದುವರೆಸಿ. ಆಮೇಲೆ ನೋಡೋಣ. ಅಷ್ಟರಲ್ಲಿ ಅವರು ಮನಸ್ಸು ಛೇಂಜ್ ಮಾಡಿಕೊಳ್ಳುತ್ತಾರೆ.